ವಿಚಾರವನ್ನು ಹೇಳುವಾಗ ಯಾವುದೋ ಒಂದು ನಾಟಕದ ಮೂಲಕ ಹೇಳುವುದರಿಂದ ಆ *ಪರ್ಟಿಕುಲರ್* ಆದ ವಿಚಾರ ವಸ್ತುವನ್ನು ನಾವು ವಿದ್ಯಾರ್ಥಿಗಳಿಗೆ ತಲುಪಿಸಬಹುದು. ಇದು ಮೊದಲ ಪಾಯಿಂಟ್. ಇಷ್ಟೇ ಅಲ್ಲದೆ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ ಬರುತ್ತದೆ. ಮತ್ತು ಮನುಷ್ಯರ ಜೊತೆ ಸಂವಹಿಸಲು ಬೇಕಾದಂತಹ ಒಂದು ಕ್ರಿಯಾಶೀಲತೆ ಗೊತ್ತಾಗುತ್ತದೆ. ಯಾರ ಜೊತೆ ಹೇಗೆ ಮಾತನಾಡಬೇಕೆಂಬುದು ತಿಳಿಯುತ್ತದೆ. ಒಳಿತು ಕೆಡುಕುಗಳ ತಿಳುವು ಬರುತ್ತದೆ. ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಸಂಘಟನಾ ಶಕ್ತಿ ಹೆಚ್ಚಾಗುತ್ತದೆ. ರಂಗಭೂಮಿ ಎಂಬುದೇ ಸಂಘಟಿತ ಕಲೆ. ಒಬ್ಬರೇ ಮಾಡುವಂತಹುದಲ್ಲ. ಅದಕ್ಕೆ ಸಂಗೀತ ತಾಂತ್ರಿಕ ಅಂಶಗಳು ಇತ್ಯಾದಿ, ಇತ್ಯಾದಿಗಳೆಲ್ಲವೂ ತಿಳಿವಳಿಕೆಗೆ ಬರುತ್ತವೆ. ಬದುಕು ಎಂಬುದೇ ಸಂಘಟಿತ ಮಾಧ್ಯಮ. ರಂಗಭೂಮಿಯೂ ಸಂಘಟಿತ ಮಾಧ್ಯಮ. ಹಾಗಾಗಿ ರಂಗಭೂಮಿಯಲ್ಲಿ ಕಲಿತು, ರಂಗಭೂಮಿ ಮುಖಾಂತರ ಶಿಕ್ಷಣವನ್ನು ಕಲಿಯುವುದಿದೆಯಲ್ಲಾ ಅದು ಬದುಕನ್ನು ಅತ್ಯುತ್ತಮವಾಗಿ ಒಬ್ಬ ವಿದ್ಯಾರ್ಥಿ ನಿರ್ವಹಿಸುತ್ತಾನೆ. ನನ್ನ ತಿಳಿವಳಿಕೆ ಪ್ರಕಾರ, ನೀವು ಒಂದು ನಾಟಕ ಮಾಡಲು ನಲವತ್ತೈದು ದಿನಗಳು ತಾಲೀಮು ನಡೆಸಿ ನಾಟಕ ಮಾಡಿದರೆ ವಿದ್ಯಾರ್ಥಿ ಒಂದು ಪದವಿಯನ್ನು ಪಡೆದಿರುತ್ತಾನೆ ಎನ್ನುವ ಮಟ್ಟಕ್ಕೆ ಅವರು ಒಂದಿಷ್ಟು ಜ್ಞಾನ, ವಿಸ್ತಾರ ಎಲ್ಲವೂ ಗೊತ್ತಾಗುತ್ತದೆ. ಅಷ್ಟೇ ಅಲ್ಲದೆ ಪ್ರಯೋಗಗಳಾದಾಗ ಪ್ರಯೋಗ ಅನುಭವಗಳು, ಬೇರೆಬೇರೆ ಸ್ಥಳಗಳಲ್ಲಿ ಬೇರೆಬೇರೆ ಊರುಗಳಲ್ಲಿ ನಡೆಯುತ್ತೆ. ಬೇರೆಬೇರೆ ಪ್ರೇಕ್ಷಕರು ಅದರ ಬಗ್ಗೆ ಮಾತನಾಡುತ್ತಾರೆ. ಆಗ ಅದರ ಅನುಭವ ಕ್ಯಥಾರ್ಸಿಸ್‌ಲ್ಲಿ ಇರುವ ತರಹ ಮನುಷ್ಯ ಬೇಕಾದ, ಬೇಡವಾದ ವಿಚಾರಗಳನ್ನು ಶೋಧಿಸಿಕೊಳ್ಳಲು ಹಾಗೆ ಶೋಧನ ಯಂತ್ರವಾಗಿಯೂ ಕೂಡ ಅದು ಕೆಲಸ ಮಾಡುತ್ತದೆ.

೪. ಹೊಸಬರಿಗೆ ರಂಗ ಪ್ರವೇಶಕ್ಕೆ ಇರಬಹುದಾದ ಪೂರ್ವ ತಯಾರಿಗಳೇನು?



ಕಲಾವಿದರಲ್ಲಿ ಹೊಸಬರು ಹಳಬರು ಎಂಬುದಿಲ್ಲ, ಕಲಾವಿದರು ಯಾರೇ ಇರಲಿ, ರಂಗಭೂಮಿಯ ಆಸಕ್ತ, ಕಲಾಸಕ್ತರಿಗೆ ಬಹಳ ಮುಖ್ಯವಾಗಿ ಬೇಕಾಗಿರುವುದು ಆಸ್ಥೆ ಮತ್ತು ಆಸಕ್ತಿ, ಬದ್ಧತೆ. ಯಾವುದೇ ಶಿಕ್ಷಣವನ್ನು ಗಮನಿಸುವುದಾದರೆ ಉದಾಹರಣೆ ಒಂದರಿಂದ ೧೦ನೇ ತರಗತಿ, ೧೦ರಿಂದ ಎರಡು ವರ್ಷ ಪಿ.ಯು.ಸಿ, ಮೂರು ವರ್ಷ ಪದವಿ, ನಂತರ ಎರಡು ವರ್ಷ **ಪೋಸ್ಟ್ ಗ್ರಾಜುಯೇಷನ್, ಉನ್ನತ ಶಿಕ್ಷಣ ಪಿ.ಎಚ್.ಡಿ** ಎಂದಾದರೆ ಒಟ್ಟು ೧೫ ವರ್ಷಗಳ ತಪಸ್ಸನ್ನು ಮಾಡಿದರೆ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯ. ಹಾಗಾಗಿ ಶಿಕ್ಷಣ ಎಂಬುದು ಬೇಕು. ಅಲ್ಲಿ ಆಸಕ್ತಿ ಇರಬೇಕು, ಬದ್ಧತೆ ಇರಬೇಕು, ತಿಳಿವಳಿಕೆ ಇರಬೇಕು ಹಾಗೆ ಅಪಾರವಾದ ಕಠಿಣ ಪರಿಶ್ರಮವನ್ನು ಹಾಕಬೇಕು. ಇವಿಷ್ಟನ್ನು ಪಡೆದುಕೊಂಡು ಕೆಲವು ಸಲ ಅವಿವೇಕಿಗಳಾಗುವ ಅಥವಾ ಓದಿನ ಬಗ್ಗೆ ತಿಳಿವಳಿಕೆ ಹಿಮ್ಮುಖವಾಗುವ ಸಾಧ್ಯತೆ ಇರುತ್ತದೆ. ವಿದ್ಯಾರ್ಥಿಗಳನ್ನು ದೂಷಿಸುತ್ತಿಲ್ಲ ಕೆಲವೊಮ್ಮೆ ಆತರಹ ಸಂದರ್ಭಗಳು

ಒದಗಿ ಬಂದಿರುವ ಅನೇಕ ಉದಾಹರಣೆಗಳು ಶಿಕ್ಷಣ ಕ್ರಮದಲ್ಲಿವೆ. ಇಲ್ಲವೆಂದಿಲ್ಲ. ಆದರೆ ನಮ್ಮ ರಂಗಭೂಮಿಯ ಮೂಲಕ ನೀವೇನಾದರೂ ಈ ವಿಚಾರಗಳನ್ನು ಬದ್ಧತೆ ಇಟ್ಟುಕೊಂಡು ೧೫ ವರ್ಷ ಮಾಡಿ, ೨೦ ವರ್ಷ ಮಾಡಿ ಎಂದು ಹೇಳಲ್ಲ. ಕಡೆ ಪಕ್ಷ ಅದರ ಒಟ್ಟು ಆಶಯ ಅದರ ಸಮಗ್ರದ ಬಿತ್ತಿ ಏನಿದೆ ಅದರೊಳಗೆ ಪ್ರವೇಶ ಮಾಡಿ ಅದರ ಜೊತೆ ಹೊಸ ಹೊಸ ಹುಡುಕಾಟಗಳನ್ನು ಮಾಡುತ್ತಾ ರಂಗಭೂಮಿ ಚಲಿಸುತ್ತಾ ಹೋದರೆ ಆಸಕ್ತಿಯನ್ನು ತೋರಿದ್ದೇ ಆದರೆ, ಬದ್ಧತೆಯನ್ನು ತೋರಿದ್ದೇ ಆದರೆ ಮಾತ್ರ ಅವರಿಗೆ ಹೊಸದಾದಂತಹ ಅನ್ವೇಷಣಾ ಕ್ರಮ ಜೊತೆ ತನ್ನನ್ನು ತಾನು ಅರ್ಥ ಮಾಡಿಕೊಳ್ಳಲು ಬೇಕಾದಂತಹ ಅರಿವು ಮತ್ತು ವಿವೇಕ ಮೂಡುತ್ತೆ ಎನ್ನುವುದು ನನ್ನ ಭಾವನೆ. ಹೊಸಬರಿಗೆ ಬೇಕಾಗಿರುವುದು ಮುಖ್ಯವಾಗಿ ಆಸಕ್ತಿ ಮತ್ತು ಬದ್ಧತೆ ಕಠಿಣ ಪರಿಶ್ರಮ. ಇವತ್ತು ನಾನು ಬಂದು ನಾಳೆ ಒಂದು ನಾಟಕ ಮಾಡಿ ಬಿಟ್ಟೆ. ನಾಳೆ ಬೆಳಗ್ಗೆ ಒಂದು ತಾರಾ ವ್ಯಕ್ತಿತ್ವವಾಗಿ ಅಥವಾ ಕನ್ನಡರಂಗ ಭೂಮಿಯಲ್ಲಿ ಒಂದು ಸ್ಟಾರ್ ಆಗುವುದು ಆಗಲ್ಲ. ಅಲ್ಲಿ ದುಡಿಯಬೇಕು. ಅಲ್ಲಿ ಕೆಲಸ ಮಾಡಬೇಕು. ರಂಗಭೂಮಿ ಎನ್ನುವುದೇ ಒಂದು ದುಡಿಮೆಯ ಮೂಲ ಎನ್ನುವುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು.

೫. ಸಾಂಪ್ರದಾಯಿಕ ರಂಗಭೂಮಿಗಿಂತ ಆಧುನಿಕ ರಂಗವು (ಭಾರತ ಮತ್ತು ಪಾಶ್ಚಾತ್ಯ ರಂಗಭೂಮಿಗೆ ಸಂಬಂಧಿಸಿದಂತೆ) ಹೇಗೆ ಭಿನ್ನವಾಗಿದೆ?

ಪಾಶ್ಚಾತ್ಯ ಆಧುನಿಕ ಎನ್ನುವ ವಿಭಾಗೀಕರಣಗಳೇ ನಾನು ಒಪ್ಪುವುದಿಲ್ಲ. ಕಲೆಯ ಅಭಿವ್ಯಕ್ತಿಗೆ ನಾವು ಒಂದೊಂದು ಮಾಧ್ಯಮವನ್ನು ಕಂಡುಕೊಂಡಿರುತ್ತೇವೆ. ಪಾಶ್ಚಿಮಾತ್ಯಯರು ಒಂದು ದಾರಿಯನ್ನು ಕಂಡುಕೊಂಡಿದ್ದಾರೆ. ಸಾಂಪ್ರದಾಯಿಕ ಮಾಧ್ಯಮಗಳ ಮೂಲಕ ಸಾಂಪ್ರದಾಯಿಕ ದಾರಿಯಲ್ಲಿ ಒಂದು ದಾರಿಯನ್ನು ಕಲೆಯನ್ನು ಕಂಡುಕೊಂಡಿದ್ದಾರೆ. ಎಲ್ಲವೂ ಕೂಡ ಅದರ ಒಟ್ಟು ಆಶಯವೇ ಒಂದು ಮನುಷ್ಯ ವಿವೇಕವನ್ನು ಬಿತ್ತುವ ಮತ್ತು ತಾನು ನಂಬಿದ, ಒಪ್ಪುವ, ಮೆಚ್ಚಿದ ಕಥೆಗಳನ್ನು ಲೋಕಕ್ಕೆ ಹೇಳುವ ಆ ಮೂಲಕ ಲೋಕ ನಿರ್ಮಿತಿಯನ್ನು ಮಾಡುವ ಅದರ ಮೂಲಕ ಒಂದು ಸರ್ವಕಾಲಿಕವಾದಂತಹ ಕಲಾ ಸತ್ಯವನ್ನು ಹುಡುಕುವ ಪ್ರಯತ್ನವನ್ನು ಮಾಧ್ಯಮಗಳು ಮಾಡುತ್ತಾ ಇರುತ್ತವೆ. ಹಾಗಾಗಿ ವಿಭಾಗೀಕರಣ ಒಂದೊಂದು ವಸ್ತುವನ್ನು ಒಂದೊಂದು ರೀತಿ ಹೇಳಬೇಕು ಎಂದಿಲ್ಲ. ಕಾಲದೇಶ ಬದಲಾದಂತೆ ಭೂಗೋಳ ಬದಲಾದಂತೆ ಅಭಿವ್ಯಕ್ತಿ ಕ್ರಮಗಳು ಕೂಡ ಬದಲಾಗುತ್ತಿರುತ್ತವೆ. ಹಾಗಾಗಿ ಆ ಅಭಿವ್ಯಕ್ತಿ ಮಾಧ್ಯಮಗಳನ್ನು ನಾವೆಷ್ಟು ಪರಿಣಾಮಕಾರಿಯಾಗಿ ಬಳಸುತ್ತೇವೆ ಅದನ್ನು ಪ್ರೇಕ್ಷಕರಿಗೆ ತಲುಪಿಸುತ್ತೇವೆ ಎನ್ನುವುದೇ ಬಹಳ ಮುಖ್ಯ. ಇಲ್ಲಿ ಎಲ್ಲವೂ ಮುಖ್ಯ. ಎಲ್ಲವೂ ಅಮುಖ್ಯ. ಯಾವುದು ಮುಖ್ಯ ಯಾವುದು ಅಮುಖ್ಯ ಎಂಬುದು ಆ ಕಥೆಯ ನಾಟಕ, ವಸ್ತುವಿನ ವಿನ್ಯಾಸದ, ನಿರ್ದೇಶನದ, ಕಲಾವಿದರ ಅಭಿನಯದ ಆಧಾರದ ಮೇಲೆ ನಿಂತಿರುತ್ತದೆ ವಿನಹ ಅದು ಪಾಶ್ಚಾತ್ಯ ರಂಗಭೂಮಿ ಇದು ಸಾಂಪ್ರದಾಯಿಕ ರಂಗಭೂಮಿ ಎನ್ನುವಂತಹುದೇನು ಇಲ್ಲ. ಅದು ಅಭಿವ್ಯಕ್ತಿಯ ಮೂಲಕ ಅದೆಷ್ಟು ಪರಿಣಾಮಕಾರಿಯಾಗುತ್ತದೆ ಎಂಬುದು ಬಹಳ ಮುಖ್ಯ ಆಗುತ್ತದೆ.

೬. ರಂಗಭೂಮಿಯ ವಿವಿಧ ತಾಂತ್ರಿಕ ಆಯಾಮಗಳ ಬಗ್ಗೆ ತಿಳಿಸಿ.

ರಂಗಭೂಮಿ ಅಂದ ತಕ್ಷಣವೇ ಒಂದು ಕಥೆ, ಈಗ ಕನ್ನಡ ಆಧ್ಯಾಪಕರಾದ ನಾವು ಕಣ್ಣಿಗೆ ಕಟ್ಟುವ ಹಾಗೆ ಕಥೆಯನ್ನು ಹೇಳ್ತಾ ಇರುತ್ತೇವೆ. ಮನೋರಂಗದಲ್ಲಿ ಪಾತ್ರಗಳು ಮೂಡುತ್ತಿರುತ್ತವೆ. ಚಿತ್ರಗಳು ಮೂಡುತ್ತಿರುತ್ತವೆ ಮತ್ತು ದೃಶ್ಯಗಳು ಮೂಡುತ್ತಾ ಇರುತ್ತವೆ. ಅಷ್ಟು **ಪವರ್ಫುಲ್** ಆದ ಮಾಧ್ಯಮ ಸಾಹಿತ್ಯ. ಮತ್ತು ರಂಗಭೂಮಿ ಎರಡು ಕೂಡ. ಆದರೆ ರಂಗದ ಮೇಲೆ ಮೂಡುವುದಕ್ಕೆ ತಂತ್ರಜ್ಞಾನ ಮುಂಚೆಯಿಂದಲೂ ಇದೆ. ಆಯಾ ಕಾಲದ ತಂತ್ರಜ್ಞಾನ ಅನ್ವೇಷಣೆಗಳೇ ಆಗಿದೆ. ಬೆಳಗಿನ ವಿನ್ಯಾಸ ಬೇಕು, ವಸ್ತ್ರ ವಿನ್ಯಾಸ ಬೇಕು ಅಥವಾ ಪ್ರಸಾದನ ಕಲೆ ಬೇಕು ಇವುಗಳ ಮೂಲಕ ಏನು ಮಾಡುತ್ತಾರೆಂದರೆ ಅದರ ಪಾತ್ರವನ್ನು ಮತ್ತೊಂದಿಷ್ಟು ವಿಸ್ತರಣೆ ಮಾಡುವುದಕ್ಕೆ ಬೇಕಾದಂತಹ ಮಾಧ್ಯಮವಾಗಿ ಕೆಲಸ ಮಾಡುತ್ತದೆ. ಈ ರಂಗಭೂಮಿಯಲ್ಲಿ ಬಹಳ ಮುಖ್ಯವಾಗಿ ಗಮನಿಸುವುದು ದೇಹ ಮೊದಲನೆಯದು ದೇಹ ಮುಖ್ಯ. ಒಬ್ಬ ಕಲಾವಿದನಿಗೆ ಯಾವುದಪ್ಪ ಮುಖ್ಯ ಮಾಧ್ಯಮ ಎಂದರೆ ಅವನ ದೇಹ. ಎರಡನೆಯದು ಧ್ವನಿ ಆ ಧ್ವನಿಯ ಮೂಲಕವೇ ಅವನು ವಿಚಾರಗಳನ್ನು ತಲುಪಿಸುತ್ತಾನೆ. ಮೂರನೆಯದು ಆಹಾರ್ಯ ಗಮನಿಸಬೇಕು. ಅಲ್ಲಿ ವೇಷ ಭೂಷಣ ಬರುತ್ತದೆ ಅಥವಾ ಬೆಳಕಿನ ವಿನ್ಯಾಸ ಬರುತ್ತದೆ. ಅಥವಾ ನಾಟಕಕ್ಕೆ ಬಳಸುವಂತಹ **ಸೆಟ್ ಪ್ರಾಪರ್ಟಿ** ಬರುತ್ತದೆ. ರಂಗ ಪರಿಕಳಗಳು ಬರುತ್ತವೆ. ಅಥವಾ ಇನ್ಯಾವುದೇ ಪ್ರೇಷಕರು ಬೇಕು, ರಂಗಮಂದಿರಬೇಕು ರಂಗಮಂದಿರದಲ್ಲಿ ಧ್ವನಿ ವ್ಯವಸ್ಥೆ, ಪ್ರೇಕ್ಷಾಂಗಣ ಎಲ್ಲವೂ ಬೇಕು. ಇವೆಲ್ಲವೂ ರಂಗಭೂಮಿಯಲ್ಲಿ ತಾಂತ್ರಿಕವಾಗಿ ಒಂದು ನಾಟಕ ಅಭಿವ್ಯಕ್ತಿಯನ್ನು ಅಥವಾ ರಂಗಕಲೆಯನ್ನು ವಿಸ್ತರಿಸಲು ಬೇಕು. ಇವೆಲ್ಲವೂ ಬೇಕಾ? ಇವಿಲ್ಲದೆ ನಾಟಕ ಮಾಡಲು ಬರುವುದಿಲ್ಲವಾ ಎನ್ನುವ ಪ್ರಶ್ನೆ ಬಂದರೆ ಖಂಡಿತವಾಗಿಯೂ ಸಾಧ್ಯವಿದೆ. ಮೇಕಪ್ ಇಲ್ಲದಿದ್ದರೆ ಅದಕ್ಕೆ ಸಂಬಂಧಿಸಿದ **ಕಾಸ್ಟ್ಯೂಮ್** ಹೊಂದಿಕೆ ಆಗದಿದ್ದರೆ ಕೊನೆಗೂ ನಾಟಕ ನಂಬಿ ನಿಂತಿರುವುದೇ ನಟನ ಮೇಲೆ. ಒಬ್ಬ ನಟ, ಧ್ವನಿ ಮತ್ತು ದೇಹದ ಮೇಲೆ. ರಂಗದ ಮೇಲೆ ನಾವು ಸಮುದ್ರ ಇದೆ ಎಂದು ಹೇಳಬಹುದು ಆ ನಟ ಎಷ್ಟು ಪರಿಣಾಮಕಾರಿಯಾಗಿ ಸಮುದ್ರ ಇದೆ

ಎಂದು ಹೇಳುತ್ತಾನೆ ಎನ್ನುವುದರ ಆಧಾರದಲ್ಲಿ ಪ್ರೇಕ್ಷಕರ ಕಣ್ಣುಗಳಲ್ಲಿ ಸಮುದ್ರ ಮೂಡುತ್ತದೆ. ದೊಡ್ಡ ಕಾಡು ಎಂದು ಹೇಳುವುದಾದರೆ ಅವನು ಹೇಗೆ ಹೇಳುತ್ತಾನೆ ಎನ್ನುವುದರಲ್ಲಿ ಪ್ರೇಕ್ಷಕರಲ್ಲಿ ಮೂಡುತ್ತದೆ. ಹಾಗಾಗಿ ಈ ಸಾಧ್ಯತೆಗಳು ಉಂಟು ತಾಂತ್ರಿಕ ಅಂಶವು ಬಹಳ ಮುಖ್ಯವಾಗಿ ಇರುತ್ತದೆ ಹಾಗಾಗಿ ನಾಟಕ ರಚನೆ ಅದರ ಪ್ರಯೋಗ ಕೂಡ ತಾಂತ್ರಿಕ ಅಂಶಗಳೇ ಎಂದು ಹೇಳಬಲ್ಲೆ.

೭. ರಂಗಭೂಮಿಯಲ್ಲಿ ವಸ್ತ್ರ ವಿನ್ಯಾಸದ ಮಹತ್ವವನ್ನು ತಿಳಿಸಿ.

ಆಹಾರ್ಯಕ್ಕೆ ಸಂಬಂಧಿಸಿದಂತೆ ನಾನು ರಾಜನನ್ನು ರಾಜನನ್ನಾಗಿ ತೋರಿಸಬೇಕು. ಕಿರೀಟ ಹಾಕಿದರೇನೇ ರಾಜ, ಕಿರೀಟ ಇಲ್ಲದ ರಾಜನನ್ನು ನಾವು ನೋಡಲು ಸಾಧ್ಯವಿಲ್ಲವೇ ಎನ್ನುವುದಾದರೆ, ಕಿರೀಟ ಬಿಚ್ಚಿದ ಸಮಯದಲ್ಲಿ ರಾಜನ ಅಭಿವ್ಯಕ್ತಿ ಏನಿರುತ್ತೆ? ಎಂಬುದು ಕೂಡ ಸಾಧ್ಯತೆ ಇದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಹಾಗಾಗಿ ಮತ್ತು ಹೊಸ ಹೊಸ ಪ್ರಯೋಗಗಳು ಆಗುತ್ತಿರುತ್ತವೆ. ಈಗ ದ್ರೌಪದಿಯನ್ನು ತೋರಿಸಬೇಕಾದರೆ ಅಥವಾ ಪುರಾಣದ ಯಾವುದೇ ಪಾತ್ರಗಳನ್ನು ತೋರಿಸುವಾಗ ಅದದೇ ಕಾಸ್ಟ್ಯೂಮ್‌ನಲ್ಲಿ ತೋರಿಸಬೇಕೆಂದೇನು ಇಲ್ಲ. ರಾಕ್ಷಸಿಯನ್ನು ರಾಕ್ಷಸಿಯಾಗಿ ತೋರಿಸಬೇಕಾದರೆ ಆ ಪಾತ್ರದ ಕ್ಯಾರೆಕ್ಟರೈಸೇಷನ್ ಅದರ ಮೂಲಕ ನಾವು ತೋರಿಸಬೇಕಾಗುತ್ತದೆ. ಯಾವುದೇ ಪಾತ್ರವನ್ನು ಅಭಿವ್ಯಕ್ತಿಸಬೇಕಾದರೆ ನಟ ಮುಖ್ಯವಾಗಿ ತನ್ನ ಧ್ವನಿ ಮತ್ತು ದೇಹದಲ್ಲಿ ದೇಹವನ್ನೇ ನಂಬಬೇಕು. ಮೂರನೆಯದು ಆಹಾರ್ಯದ ಮೂಲಕ ವಸ್ತ್ರವಿನ್ಯಾಸ ಸೇರಿದರೆ ಅಪ್ ಲಿಫ್ಟ್ ಮಾಡುತ್ತದೆ. ಜೊತೆಗೆ ಮ್ಯೂಸಿಕ್ ಸೇರಿದರೆ ಮತ್ತಷ್ಟು ಅಪ್ಲಿಫ್ಟ್ ಆಗುತ್ತದೆ. ಸಾಕಷ್ಟು ಮೇಸ್ತರಕ್ಕೆ ನಾಟಕ ಹೋಗುವ ಸಾಧ್ಯತೆ ಇದೆ. ವಸ್ತ್ರವಿನ್ಯಾಸವೇ ಅಂತಿಮವೆಂದಿಲ್ಲ. ವಸ್ತ್ರ ವಿನ್ಯಾಸ ಇದ್ದರೆ ಆ ನಾಟಕಕ್ಕೆ ಹೊಳಪು, ಆ ನಾಟಕಕ್ಕೆ ಮೆರಗು ಇನ್ನೊಂದಷ್ಟು ಅರ್ಥಗಳನ್ನು ವಿಸ್ತರಿಸಲು ಸಾಧ್ಯವಾಗುತ್ತದೆ. ವಸ್ತ್ರವಿನ್ಯಾಸದಲ್ಲೂ ಹೊಸ ಹೊಸ ವಿನ್ಯಾಸಗಳನ್ನು ಮಾಡುತ್ತಿದ್ದಾರೆ. ಹೊಸ ಹೊಸ ಬಗೆಗಳಲ್ಲಿ ನಾಟಕವನ್ನು ತೋರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದು ಈ ಕಾಲದ ಅನ್ವೇಷಣೆ ಎಂದು ಹೇಳಬಹುದು

೮. ಅಮೂರ್ತತೆಯ ಸಂಕೀರ್ಣತೆಗಳನ್ನು ತರುವುದರ ಕಷ್ಟಗಳನ್ನು ವಿವರಿಸಿ.

ಖಂಡಿತವಾಗಿಯೂ ಏನು ಕಷ್ಟವಿಲ್ಲ ಕವಿಗಳಿಗೆ ಮಾತ್ರ ರೂಪಕಗಳನ್ನು ಬಳಸುವುದು ಅಥವಾ ಮೆಟಾಫರ್‌ನ ಬಳಸುವುದು ಕವಿ, ಕಲಾವಿದರು ಚಿತ್ರದಲ್ಲಿ ಬಳಸುವುದು. ರಂಗದ ಮೇಲೆ ಕೂಡ ಅಮೂರ್ತವಾದ ಕಲ್ಪನೆಗಳನ್ನು ಮತ್ತು ಸಂಕೀರ್ಣವಾದ ವಿಚಾರಗಳನ್ನು ಹೇಳಲಿಕ್ಕೆ ಸಾಧ್ಯವಿದೆ. ಆ ತರದ ಅನೇಕ ನಾಟಕಗಳು ರಂಗದ ಮೇಲೆ ರೂಪಕಗಳನ್ನು ಮೆಟಾಫರ್‌ಗಳನ್ನು ಸೃಷ್ಟಿಸುವ ಉದಾಹರಣೆಗಳಿವೆ. ಅದು ಕಷ್ಟ ಎಂದೇನಿಲ್ಲ ಆ ಪ್ರತಿ ನಿರ್ದೇಶಕನ ಕ್ರಿಯಾಶೀಲತೆ, ಆ ನಿರ್ದೇಶಕನ ಓದು, ಹರವು, ಅದರ ವಿಸ್ತಾರ, ಅವನ ಜೀವನ ಕ್ರಮದ ಅನುಭವ, ಅವನು ಅನುಭವಿಸಿದ ಸಂಕಟ. ಈ ಮೆಟಾಫರ್‌ಗಳು ಹೊರಗಿರುವುದಿಲ್ಲ. ಲೇಖಕನ ಒಳಗೆ ಇರುತ್ತವೆ. ಒಬ್ಬ ಕಲಾವಿದನ ಒಳಗೆ, ಒಬ್ಬ ನಿರ್ದೇಶಕನ ಒಳಗೆ ಇರುತ್ತವೆ. ಆ ಕಾಲಕ್ಕೆ ಆ ನಾಟಕದ ವಸ್ತು ಇದನ್ನು ಹೇಳ್ತಾ ಇದೆ. ಆ ಪಾತ್ರಧಾರಿ ಇದನ್ನು ಗಮನಿಸ್ತಾ ಇರ್ತಾನೆ. ನಿರ್ದೇಶಕ ಇದನ್ನು ಹೇಳುತ್ತಿದ್ದಾನೆ ಎಂದಾಗ ಒಂದು ದೃಶ್ಯವನ್ನು ಸೃಷ್ಟಿ ಮಾಡಿಬಿಡಬಹುದು. ಆ ಸೃಷ್ಟಿ ಮಾಡಿದ್ದನ್ನು ಮೆಟಾಫರ್ ಆಗಿ ರೂಪಿಸಲಿಕ್ಕೆ ಸಾಧ್ಯವಿದೆ. ಹಾಗಾಗಿ ಕಲಾವಿದನ ದೇಹ ಭಾಷೆಯ ಮೂಲಕವೂ ನೋಡಬಹುದು. ರಂಗಪರಿಕರಗಳ ಮೂಲಕವೂ ಮೆಟಾಫರ್ಸ್‌ನ ಸೃಷ್ಟಿಸಬಹುದು. ಬೆಳಗಿನ ವಿನ್ಯಾಸದಲ್ಲಿ ರೂಪಕವನ್ನು ಸೃಷ್ಟಿಸಬಹುದು. ಹಾಗಾಗಿ ಬಹು ಬಗೆಯಲ್ಲಿ ಒಬ್ಬ ನಿರ್ದೇಶಕ ರಂಗದ ಮೇಲೆ ಅಮೂರ್ತವಾದ ಕಲ್ಪನೆಗಳನ್ನು ಅಥವಾ ಸಂಕೀರ್ಣವಾದ ಕಲ್ಪನೆಗಳನ್ನು ಸೃಷ್ಟಿಸಲಿಕ್ಕೆ ಸಾಧ್ಯವಿದೆ ಅನ್ನುವುದನ್ನು ನಾವು ಗಮನಿಸಬೇಕು. ಆದರೆ ಆ ವಸ್ತು, ವಿನ್ಯಾಸ, ನಿರ್ದೇಶಕ ಅನುಭವ, ಯೋಚನಾ ಕ್ರಮ ಮತ್ತು ಅವನು ನಡೆದು ಬಂದ ಹಾದಿ ಅವನ ಜೀವನದ ಹೋರಾಟ ಅವನ ಜೀವನದ ಮನರಂಜನ ಕ್ರಮ ಎಲ್ಲವೂ ಇದಕ್ಕೆ ಉದಾಹರಣೆ ಆಗುತ್ತದೆ.

೯. ಕಥೆ, ಕಾದಂಬರಿಗಳನ್ನು ರಂಗಕ್ಕೆ ಅಳವಡಿಸುವಾಗ ಇರಬೇಕಾದ ಎಚ್ಚರವನ್ನು ತಿಳಿಸಿ.

ಎಚ್ಚರ ಎಂದೇನಿಲ್ಲ ದೃಶ್ಯವಾಗುವ ಗುಣ ಇದೆಯಾ ಎಂಬುದನ್ನು ಪರಿಶೀಲನೆ ಮಾಡಬೇಕು. ಯಾವುದೇ ನಾಟಕ ದೃಶ್ಯವಾಗಬೇಕು. ಆ ದೃಶ್ಯವಾಗುವ ಗುಣ ಇದ್ದರೆ ನಾಟಕೀಯ ಅಂಶಗಳನ್ನು ಬೆರೆಸಿದಾಗ ಹೇಳಿಕೇಳಿ ನಾಟಕವೇ ಆಗಿರುತ್ತದೆ. ನಾವು ಅದನ್ನು ನಿರೂಪಣೆ ಮಾಡೋಕೆ ಆಗೊಲ್ಲ. ಅಲ್ಲಿ ದೃಶ್ಯವಾಗುವ ಪ್ರತಿ ಮಾತು ಅಥವಾ ಪ್ರತಿ ದೃಶ್ಯ ದೃಶ್ಯವಾಗುವಂತಿದ್ದರೆ ಕಥೆ ಕಾದಂಬರಿ ಮಾತ್ರವಲ್ಲ ಇಡೀ ಜಗತ್ತಿನ ಯಾವುದೇ ಮೂಲೆಯಿಂದ ಯಾವುದೇ ವಸ್ತುವನ್ನು ತಂದರು ಅದನ್ನು ನಾಟಕ ಮಾಡಬಹುದು.

೧೦. ನಾಟಕ ಒಂದರ ತಯಾರಿಯ ಹಂತಗಳನ್ನು ವಿವರಿಸಿ.

ಈಗ ಅದಕ್ಕೊಂದು ಸಾಂಪ್ರದಾಯಿಕವಾಗಿ ತಾಲೀಮು ಮಾಡುತ್ತಾರೆ. ಅದನ್ನು ೪೦ ರಿಂದ ೪೫ ದಿನ ರೀಡಿಂಗ್ ಮಾಡುತ್ತಾರೆ. ಅನಂತರ ಕ್ಯಾರೆಕ್ಟರೈಸೇಶನ್ ಮಾಡುತ್ತಾರೆ. ಡೈಲಾಗ್‌ಗಳನ್ನು ಪ್ರಾಕ್ಟೀಸ್ ಮಾಡ್ತಾರೆ. ಪಾತ್ರಧಾರಿ ಎಲ್ಲಿ ನಿಲ್ಲಬೇಕು ಎಲ್ಲಿ ನಿಲ್ಲಬಾರದು ಎಂದು ಬ್ಲಾಕ್ ಮಾಡುತ್ತಾರೆ. ನಿರ್ದೇಶಕ ವರ್ಕ್ ಮಾಡುತ್ತಾರೆ. ಮತ್ತೆ ಮತ್ತೆ ಅದು ರಂಗ ತಾಲೀಮು ಆಗ್ತಾ ಆಗ್ತಾ ಕೊನೆಗೆ ಅದು ನಾಟಕದ ಪ್ರಯೋಗದ ಹಂತಕ್ಕೆ ಬರುತ್ತದೆ. ಇದು ಒಂದು ರೀತಿಯ ಸಾಧಾರಣವಾದಂತಹ ಪ್ರಯೋಗದ ಕ್ರಮ. ನಾಟಕದ ತಾಲೀಮು ಇತ್ಯಾದಿ ಇತ್ಯಾದಿಗಳಲ್ಲಿ ಅಂದ್ರೆ ಇವತ್ತು ಇದು ಬದಲಾಗ್ತಾ ಇರುವುದನ್ನು ಗಮನಿಸಬಹುದು. ಇವತ್ತಿನ ದಿನಗಳಲ್ಲಿ ವೀಕೆಂಡ್ ಥಿಯೇಟರ್ ಮಾಡಿಕೊಂಡಿದ್ದಾರೆ. ಮತ್ತು ಇವತ್ತು ಆನ್‌ಲೈನ್‌ಗಳಲ್ಲಿ ಡೈಲಾಗ್ಸ್ ಗಳನ್ನು ರನ್ ಮಾಡಿಕೊಳ್ಳುವುದು, ಮಾತುಗಳನ್ನು ಕೂರಿಸಿಕೊಳ್ಳುವ ಹೊಸ ಹೊಸ ಕ್ರಮಗಳು ಅಥವಾ ವಿಡಿಯೋ ಕಾಲ್ಸ್ ಇರಬಹುದು, ಹೊಸ ಹೊಸ ಕ್ರಮಗಳನ್ನು ಹೊಸ ಪ್ರವೇಶಿಕೆ ಅಗತ್ಯ ಅಥವಾ ಅನಗತ್ಯ ಎಂಬುದರ ಚರ್ಚೆ ನಾನು ಮಾಡುವುದಿಲ್ಲ. ರಂಗಭೂಮಿಗೆ ಬೇಕಾದಂತಹ ಪ್ರವೇಶಕ್ಕೆ ಬೇಕಾದಂತಹ ಒಂದು ಮಾಧ್ಯಮವನ್ನು ಆಯಾ ಕಾಲ ಹುಡುಕಿ ಕೊಳ್ಳುತ್ತಾ ಬಂದಿದೆ. ಆದರೆ ಒಬ್ಬ ಒಂದು ಗುಂಪು ಅಥವಾ ತಂಡ ಸೇರಿ ಅಲ್ಲಿ ಪ್ರಯೋಗ ಮಾಡಿ ಆ ಮೂಲಕ ನಾಟಕವನ್ನು ಕಟ್ಟಿಕೊಳ್ಳುವುದು ಇದಿಯಲ್ಲ ಅಲ್ಲಿ ಕೇವಲ ನಾಟಕವನ್ನು ಮಾಡ್ತಾ ಇರಲ್ಲಾ, ಅಲ್ಲಿ ಮನುಷ್ಯತ್ವ, ಬಂಧುತ್ವ, ನಟ ನಟಿಯರ ನಡುವಿನ ಹೊಂದಾಣಿಕೆ ಭಾವ, ಒಂದು ಸಂಘಟನೆ, ಇವೆಲ್ಲವೂ ಅಲ್ಲಿ ರೂಪುಗೊಳ್ಳುತ್ತಾ ಇರುತ್ತವೆ. ಹಾಗಾಗಿ ತಾಲಿಮೂ ಎಂದರೆ ಅದು ಕೇವಲ ನಾಟಕವಲ್ಲ ಅದು ಜೀವನಕ್ಕೆ ಬೇಕಾದ ತಾಲೀಮು ಆಗಿರುತ್ತದೆ ಎನ್ನುವುದನ್ನು ನಾವು ಒಪ್ಪಬೇಕು.

೧೧. ರಂಗವು ಕಾಲ ಮತ್ತು ದೇಶವನ್ನು ನಿಭಾಯಿಸುವುದು ಹೇಗೆ?

ನೋಡಿ, ಈಗ ಹಸಿವಿಗೆ ಯಾವ ದೇಶ, ಪ್ರೀತಿಗೆ ಯಾವ ಕಾಲ, ಅವರು ಮಳೆಗಾಲದಲ್ಲಿ ಪ್ರೀತಿ ಮಾಡುತ್ತಿದ್ದರು. ಬೇಸಿಗೆ ಕಾಲದಲ್ಲಿ ಪ್ರೀತಿ ಮಾಡುತ್ತಿದ್ದರು. ಹಾಗಾಗಿ ಕಲೆ ಎನ್ನುವುದೇ ಕಾಲದೇಶವನ್ನು ಮೀರಿದುದು. ಚಿತ್ರಕಲೆ ಇರಬಹುದು ಮತ್ತೊಂದು ಯಾವುದೇ ಇರಬಹುದು. ಹಾಗೆ ಕಾಲ ದೇಶದ ನಿಯಂತ್ರಣವಿದ್ದಿದ್ದರೆ ಶೇಕ್ಸ್‌ಪಿಯರ್ ನಮಗೆ ಬರುತ್ತಿರಲಿಲ್ಲ. ಲೋರ್ಕಾ ನಮಗೆ ಗೊತ್ತಾಗುತ್ತಿರಲಿಲ್ಲ, ಹಾಗಾಗಿ ಬಹಳ ಮುಖ್ಯವಾದ ಪ್ರಶ್ನೆ ಹೌದಾದರೆ, ಅಷ್ಟೇ ಮುಖ್ಯವಾದ ಪ್ರಶ್ನೆ ಕಾಲ ದೇಶ ಎನ್ನುವ ಸಂದರ್ಭದಲ್ಲಿ ರಂಗಾಭಿವ್ಯಕ್ತಿಗಾಗಲಿ ಯಾವುದೇ ಕಾಲ ಅಭಿವ್ಯಕ್ತಿಗಾಗಿ ಇಲ್ಲ. ಅದನ್ನೇ ಕಲೆ ಎನ್ನುವುದು.

೧೨. ನಟನಾ ಸಾಮರ್ಥ್ಯವನ್ನು ಉದಾಹರಣೆಗಳೊಂದಿಗೆ ತಿಳಿಸಿ.

ಕಲಾವಿದ ಕಲಾವಿದೆಯ ಸಾಮರ್ಥ್ಯ ಹೇಗೆ ಸಾಬೀತಾಗುತ್ತದೆ ಎಂದರೆ, ಹಿಂದಿನ ಪ್ರಶ್ನೆಗಳಿಗೆ ಉತ್ತರಿಸಿದಾಗ ತಿಳಿಸಿದಂತೆ ಒಬ್ಬ ಕಲಾವಿದ ತನ್ನನ್ನು ತಾನು ಮೊದಲು ನಂಬುತ್ತಾನೋ, ತನ್ನ ದೇಹವನ್ನು ತನ್ನ ಧ್ವನಿಯನ್ನು ತನ್ನ ಕಲ್ಪನಾ ಶಕ್ತಿಯನ್ನು ಅನುಭವ ಜಗತ್ತನ್ನು ಅವನು ಎಷ್ಟು ಪರಿಣಾಮಕಾರಿಯಾಗಿ ಅದನ್ನು ನಂಬಿ ಕೆಲಸ ಮಾಡುತ್ತಾನೋ ನಿರ್ದೇಶಕರ ಕಲ್ಪನೆಯನ್ನು ನಿರ್ದೇಶಕರ ವಿನ್ಯಾಸವನ್ನು ಅವನು ಒಳಗೊಳ್ಳುತ್ತಾನೋ, ಮತ್ತು ನಾಟಕಕಾರ ಬರೆದಿರುವ ವಿಚಾರವನ್ನು ಅಧ್ಯಯನ ಮಾಡಿ ಅದರ ಟೆಕ್ಸ್ಟ್ ಅಥವಾ ಸಬ್ ಟೆಕ್ಸ್ಟ್‌ನ ಅರ್ಥ ಮಾಡಿಕೊಳ್ಳುತ್ತಾನೋ ಇದಿಷ್ಟು ಅರ್ಥ ಮಾಡಿಕೊಂಡ ಮೇಲೆ ಆತ ಅಥವಾ ಆಕೆ ತೆಗೆದುಕೊಳ್ಳುವ ಪಾತ್ರ ಇದೆಯಲ್ಲ ಆ ಪಾತ್ರದ ಬಗೆಗೆ ಅಧ್ಯಯನ ಮಾಡಿಕೊಂಡು, ಕ್ಯಾರೆಕ್ಟರೈಸ್ ಮಾಡಿಕೊಂಡು ಅದಕ್ಕೆ ಇರುವ ಬಹುಮುಖತೆಗಳೇನು? ಅದಕ್ಕೆ ಇರುವ ಆಯಾಮಗಳೇನು? ಒಬ್ಬ ನಟ ಕೂಡ ತುಂಬಾ ರಿಸರ್ಚ್ ಮಾಡಬೇಕಾಗುತ್ತದೆ. ಸರಳ ಇಲ್ಲ. ಒಬ್ಬ ಉತ್ತಮ ನಟ ರಂಗದ ಮೇಲೆ ನಿಂತಿದ್ದಾನೆಂದರೆ ಬಹಳ ದೊಡ್ಡ ತಯಾರಿಯೇ ಇರುತ್ತದೆ. ಆನಂತರ ಕಾಸ್ಟ್ಯೂಮ್, ಲೈಟ್ ಪ್ರೇಕ್ಷಕರನ್ನು ಡೀಲ್ ಮಾಡುವುದು ಇವೆಲ್ಲವೂ ಬಹಳ ಮುಖ್ಯ ಇವೆಲ್ಲವನ್ನೂ ಯಾವ ನಟ ಒಳಗಿನಿಂದ ಮಾಡಿಕೊಂಡು ಹೋಗುತ್ತಾನೋ ಅವನು ರಂಗಭೂಮಿಯಲ್ಲಿ ಮುಖ್ಯ ನಟರು ಅಂತ ಇರೋಲ್ಲ ಅವುಗಳನ್ನು ತಲುಪಿಸುವ ಸಮರ್ಥ ನಟನಾಗಿ ಅಥವಾ ಸಮರ್ಥ ನಟಿಯಾಗಿ ಕಾಣಿಸಿಕೊಳ್ಳುತ್ತಾರೆ.

೧೩. ರಂಗದಲ್ಲಿ ಆಂಗಿಕ ಚಲನೆ, ಮಾತು, ಧ್ವನಿ ಮತ್ತು ಸಂಗೀತದ ಮಹತ್ವವನ್ನು ವಿವರಿಸಿ.

ಅಂಗಿಕ ಚಲನೆ ಎನ್ನುವುದೊಂದು ಭಾಷೆ. ದೇಹವೇ ಒಂದು ಭಾಷೆಯ ಮಾಧ್ಯಮ. ನೀವು ತಲೆಯ ಮೇಲೆ ಕೈ ಇಟ್ಟುಕೊಂಡು ಕೂತುಕೊಂಡರೆ ಒಂದರ್ಥ ಬರುತ್ತೆ. ಕೆನ್ನೆಯ ಮೇಲೆ ಕೈ ಇಟ್ಟುಕೊಂಡು ಕೂತರೆ ಒಂದರ್ಥ ಬರುತ್ತೆ. ಹೊಟ್ಟೆಯ ಮೇಲೆ ಕೈ ಇಟ್ಟುಕೊಂಡು ಕೂತರೆ ಒಂದರ್ಥ ಬರುತ್ತದೆ. ಅಥವಾ ಕಣ್ಣಿನ ಮೇಲೆ ಕೈ ಇಟ್ಟುಕೊಂಡು ಕೂತರೆ ಒಂದರ್ಥ ಬರುತ್ತದೆ. ಕಾಲ ಮೇಲೆ ಕಾಲು ಹಾಕಿಕೊಂಡರೆ ಒಂದರ್ಥ ಇರುತ್ತದೆ. ಕಾಲನ್ನು ಬಿಡುಬಿರುಸಾಗಿ ನಿಂತುಕೊಂಡರೆ ಒಂದು ಅರ್ಥ ಬರುತ್ತದೆ. ನೋಡಿ ಪ್ರತಿಯೊಂದಕ್ಕೂ ನಮ್ಮ ಜೀವನ ಕ್ರಮದೊಳಗೆ ಒಂದು ಅರ್ಥವಿದೆ. ಕಣ್ಣು ಜೋರಾಗಿ ಬಿಟ್ಟರೆ ಒಂದು ಅರ್ಥ. ಕಣ್ಣು

ನಿಧಾನಕ್ಕೆ ತೆಗೆದರೆ ಒಂದರ್ಥ. ಕಣ್ಣು ಅರಳಿಸಿದರೆ ಒಂದು ಅರ್ಥವಿದೆ. ಅಥವಾ ಹಲವು ಅರ್ಥಗಳಿರಬಹುದು ಅಥವಾ ದೇಹದ ಚಲನೆ ರಂಗದ ಮೇಲೆ ಎಷ್ಟು ಸೂಕ್ಷ್ಮ ಇರುತ್ತದೆ ಎಂದರೆ ದೈಹಿಕ ಚಲನೆ ತುಂಬಾ ಸ್ಪಷ್ಟವಾಗಿ ನಿಖರವಾಗಿ ಪ್ರೇಕ್ಷಕನಿಗೆ ಗೊತ್ತಾಗುತ್ತಿರುತ್ತದೆ. ಅಷ್ಟು ನಿಖರವಾಗಿ ಗೊತ್ತಾಗುತ್ತಿರುವ ಪ್ರೇಕ್ಷಕನನ್ನು ಅವನು ನಿಯಂತ್ರಿಸುತ್ತಿರುತ್ತಾನೆ. ತನ್ನ ಉಸಿರಾಟ ಕ್ರಮವನ್ನು ಕೂಡ ನಟ ಅಥವಾ ನಟಿ ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾರೆ. ಆ ನಿಯಂತ್ರಣವೇ ಅವನ ದೇಹವನ್ನು ನಿಯಂತ್ರಿಸುತ್ತಿರುತ್ತದೆ. ಸಮರ್ಥವಾದಂತಹ ದೇಹ ನಿಯಂತ್ರಣ ಅಥವಾ ಚಲನೆ ಇದೆಯಲ್ಲ ಆ ಚಲನೆ ಇದ್ದಾಗ ಅವನು ಹೇಳಬೇಕಾದ ವಿಚಾರವನ್ನು ಅಥವಾ ಸಮಾಜಕ್ಕೆ ತಲುಪಿಸಬೇಕಾದ ವಿಚಾರವನ್ನು ತಲುಪಿಸಲು ಸಾಧ್ಯವಾಗುತ್ತದೆ. ಇಲ್ಲವೆಂದರೆ ಆಗೋಲ್ಲ ಕೆಲವು ಸಲ ನಟ ತನ್ನ ದೈಹಿಕವಾದಂತಹ ಸಾಮರ್ಥ್ಯವನ್ನು ರಂಗದ ಮೇಲೆ ಕುಸಿದು ಹೋದನೆಂದರೆ ಅವನ ವಿಚಾರ ತಲುಪಿಸಲು ಸಾಧ್ಯವೇ ಆಗೋಲ್ಲ. ಆಗ ಏನಾಗುತ್ತೆ ನಾಟಕ ಸಮಾಜಕ್ಕೆ ಯಾವ ವಿಚಾರವನ್ನು ಸಂವಹನ ಮಾಡಲಿಕ್ಕೆ ಪ್ರಯತ್ನ ಪಡುತ್ತಿದ್ದನೋ ಆ ವಿಚಾರ ಸಂವಹನ ಮಾಡಲಾಗುವುದಿಲ್ಲ. ಆ ದೃಷ್ಟಿಯಿಂದ ದೈಹಿಕ ಚಲನೆ ಬಹಳ ಮುಖ್ಯ. ಇದಕ್ಕೆ ಪೂರಕವಾಗಿ ಸಂಗೀತ ಇದ್ದಾಗ ಅದನ್ನು ನಾವು ಹೇಳಬೇಕಾದಂತಹ ವಸ್ತು ವಿಚಾರವನ್ನು ಆ ಪಾತ್ರಕ್ಕೆ, ಭಾವನೆಗೆ, ದೃಶ್ಯಕ್ಕೆ, ಸನ್ನಿವೇಶಕ್ಕೆ ಅನುಗುಣವಾಗಿ ಹೇಳ್ತಾ ಹೋಗುವುದರಿಂದ ಅದು ಅತ್ಯಂತ ಪ್ರಮುಖವಾಗಿ ಪರಿಣಾಮವನ್ನು ಪ್ರೇಕ್ಷಕನಲ್ಲಿ ಬೀರುತ್ತೆ. ಮತ್ತು ನಟನಿಗೂ ಅಭಿನಯಿಸುವುದಕ್ಕೆ ಅಥವಾ ಅನುಭವಿಸುವುದಕ್ಕೆ ಬೇಕಾದಂತಹ ದಾರಿಯನ್ನು ಮಾಡಿಕೊಡುತ್ತದೆ.

೧೪. ಕರ್ನಾಟಕದ ರಂಗಭೂಮಿಯ ಇತ್ತೀಚಿನ ಮಹತ್ವದ ಬೆಳವಣಿಗೆಗಳ ಬಗ್ಗೆ ತಿಳಿಸಿ.

ಕನ್ನಡ ರಂಗಭೂಮಿ ಇವತ್ತು ಬಹಳ ಮುಖ್ಯವಾಗಿ ಹೊಸ ಚಲನೆ ಕಡೆ ಹೋಗಿದೆ. ಅಂದ್ರೆ ಇರುವ ವಿಚಾರಗಳನ್ನು ಮತ್ತೆ ಮತ್ತೆ ಹೇಳಿದ ಮತ್ತೆ ಪ್ರಕಟಪಡಿಸಿದ ರಾಜ ಮಹಾರಾಜರ ಅರಮನೆಗಳ ಕಥೆಗಳನ್ನು ಬಿಟ್ಟು, ನೀವು ಅಂಚೆಗೆ ತಳ್ಳಿದ ಅಥವಾ ಇದುವರೆಗೂ ಮುಖ್ಯ ವಾಹಿನಿಯಲ್ಲಿ ಚರ್ಚಿಸಬೇಕಾದ ಕಥೆ ಅಂತ ಅನ್ನಿಸದ, ಅಂತಹ ಕಥೆಗಳನ್ನೆಲ್ಲ ಅಂತ ವಸ್ತು, ವಿಷಯಗಳನ್ನೆಲ್ಲ ರಂಗದ ಮೇಲೆ ತರ್ತಾ ಇದ್ದಾರೆ. ತುಂಬಾ ಜನ ಹೊಸ ನಿರ್ದೇಶಕರಿರಬಹುದು, ರಂಗಭೂಮಿಗೆ ಪ್ರವೇಶ ಮಾಡುತ್ತಿರುವಂತಹ ಹೊಸ ಚಿಂತಕರು ಈ ತರಹ ಯೋಚಿಸುತ್ತಿದ್ದಾರೆ. ನೀವು ಮಾನ್ಯ ಅಲ್ಲ ಅಂತ ಬಿಟ್ಟವೆಲ್ಲವೂ ಜಗತ್ತಿನ ಮುಖ್ಯವಾದ ವಸ್ತುಗಳಾಗಿವೆ. ದಮನಿತರ ನೋವು ಇರಬಹುದು, ಶೋಷಿತರ ಸಂಕಟ ಇರಬಹುದು, ಅನೇಕ ಕಾವ್ಯ ಕಾದಂಬರಿ ಸಿನಿಮಾ ಇವುಗಳು ನಾಟಕ ಆಗ್ತಿವೆ. ಹೊಸ ಹೊಸ ದಾರಿಗಳನ್ನು, ಪ್ರಯೋಗ ಮಾದರಿಗಳನ್ನು ರಂಗಭೂಮಿಯಲ್ಲಿ ಕಾಣಬಹುದು. ಜೀವನ ಚರಿತ್ರೆಗಳು ನಾಟಕವಾಗಿ ರಂಗಕ್ಕೆ ಬರ್ತಾ ಇವೆ. ಇದು ಯಾವಾಗಲೂ ಆರೋಗ್ಯಕರ ಬೆಳವಣಿಗೆ. ನಾವು ಹದ್ದಿಹೋದ, ಸಂಕಟಕ್ಕೆ ಈಡಾದ, ನೋವಿನಲ್ಲಿ ತಿಂದು ಹೋದಂತಹ ಅನೇಕ ಪಾತ್ರಗಳು ಇರುತ್ತವೆ ಅವು ರಂಗದ ಮೇಲೆ ಬರ್ತಾ ಇವೆ. ಇವುಗಳ ಕಥೆಯನ್ನು ಕೇಳ ಬೇಕಿದೆ ಎಂದು ಹೊಸ ನಿರ್ದೇಶಕರು ಈ ಕಾಲದ ರಂಗ ಕರ್ಮಿಗಳು ಮಾಡುತ್ತಿರುವುದು ಬಹಳ ಮುಖ್ಯವಾದಂತಹ ಪ್ರಯೋಗ. ಹಾಗಾಗಿ ರಂಗಭೂಮಿ ಇವತ್ತು ಹೊಸ ಚಿಂತನೆಯ ಕಡೆ, ಆಲೋಚನಾ ಕ್ರಮದ ಕಡೆ, ಆಶಯದ ಕಡೆಗೆ ತನ್ನ ವಿಸ್ತಾರವಾದ ಮುಂಚಾಚುಗಳನ್ನು ದಾಖಲಿಸುತ್ತಿದೆ. ಕೇಂದ್ರ ಮತ್ತು ಪರಧಿ ಎನ್ನುವುದನ್ನು ಸರಿಸಿ ಪರಿಧಿಯಲ್ಲಿದ್ದವು ಕೇಂದ್ರದಲ್ಲಿರುವುದಕ್ಕೆ, ಕೇಂದ್ರದಲ್ಲಿದ್ದವು ಕೂಡ ಪರಿಧಿಗೆ ಹೋಗಬಹುದಾದಂತಹ ಸಾಧ್ಯತೆಗಳಿವೆ. ಅಂತ ಅನೇಕ ಪ್ರಯೋಗಗಳು ಕನ್ನಡ ರಂಗಭೂಮಿಯಲ್ಲಿ ಎದುರಾಗುತ್ತಿರುವುದನ್ನು ಕಾಣಬಹುದು. ಆದರೆ ತುಂಬಾ ಪ್ರಯೋಗಗಳು ರಂಗಭೂಮಿಯಲ್ಲಿ ಗಮನಿಸಬಹುದು.

೧೫. ಮಕ್ಕಳ ನಾಟಕ ಮತ್ತು ಬೀದಿ ನಾಟಕಗಳ ಬಗ್ಗೆ ಚರ್ಚಿಸಿ.

ಮಕ್ಕಳ ನಾಟಕ ಶಾಲಾ ಶಿಕ್ಷಣ ಇರಬಹುದು ಅಥವಾ ಯಾವುದೇ ಶಿಕ್ಷಣ ಇರಬಹುದು, ಶಿಕ್ಷಣ ಎನ್ನುವುದು ರಂಗ ಶಿಕ್ಷಣವಾದಾಗ ಅದೊಂದು ಅದ್ಭುತ ಜಗತ್ತನ್ನು ಸೃಷ್ಟಿ ಮಾಡುತ್ತೆ ಏಕೆಂದರೆ ಎರಡು ಎರಡು ನಾಲ್ಕು ಎಂದು ನಾವು ತರಗತಿಯಲ್ಲಿ ಹೇಳುವ ಬದಲು ಇಬ್ಬರು ಪಾತ್ರಧಾರಿಗಳನ್ನು ಎರಡು ಬದಿಯಲ್ಲಿ ಎರಡೆರಡು ಒಟ್ಟಿಗೆ ನಿಲ್ಲಿಸಿದ ತಕ್ಷಣ ನಾಲ್ಕು ಎನ್ನುವ ವಿಚಾರ ತುಂಬಾ ಚೆನ್ನಾಗಿ ಒಂದು ಮಗುವಿಗೆ ಅರ್ಥವಾಗುತ್ತದೆ. ಹಾಗಾಗಿ ಮಕ್ಕಳ ರಂಗಭೂಮಿ ಇದಿಯಲ್ಲ ನಾವು ದ್ಯುತಿಸಂಶ್ಲೇಷಣೆ ಕ್ರಿಯೆಯನ್ನು ಪಾತ್ರವಾಗಿ ಮಾಡುವ ಮೂಲಕ ಸೂರ್ಯ, ಪತ್ರಹರಿತ್ತು ಗಿಡ ಪಾತ್ರಗಳಾಗುವ ಮೂಲಕ ಮಾತುಗಳನ್ನು ಹೇಳಿಸಿದರೆ ತುಂಬಾ ಚೆನ್ನಾಗಿ ಇರುತ್ತದೆ. ಸಮಾಜ ವಿಜ್ಞಾನವನ್ನೂ ಪಾತ್ರ ಮಾಡಬಹುದು. ಗಣಿತವನ್ನು ಪಾತ್ರ ಮಾಡಬಹುದು. ನಾವು ಬರೀ ಹೇಳುವ ಕಡೆ ಮಕ್ಕಳನ್ನು ರೂಪಿಸಿಬಿಟ್ಟಿದ್ದೇವೆ. ಬರಿ ಹೇಳ್ತೀವಿ ನೀವು ಕೇಳಿ ಎಂದು. ಬರಿ ಕೇಳುವ ಮಕ್ಕಳಿಗೆ ತರಗತಿಯಲ್ಲಿ ಚಲನೆ ಇಲ್ಲ. ಕೂತ ಕಡೆಯೇ ಕೂತು ನಾಲ್ಕರಿಂದ ಐದು ಗಂಟೆ ಪಾಠ ಕೇಳಬೇಕು. ಮಕ್ಕಳಿಗೆ ಓಡಾಟ ಇಲ್ಲ. ಒಂದು ಗಂಟೆ ಪಿ.ಟಿ, ಒಂದು ಗಂಟೆ ಚಿತ್ರ ಬಿಡಿಸಬೇಕು. ಅದು ಆಪ್ಷನ್ ಆಗಿ ಇಟ್ಟುಕೊಂಡಿದ್ದೇವೆ. ನಿಶ್ಚಲವಾಗಿ ಮಕ್ಕಳು ಕೇಳುವ ಅಥವಾ ನೋಡುವ ಕ್ರಿಯೆಯಲ್ಲಿ ಮಕ್ಕಳು ಭಾಗಿಯಾಗ್ತಾ ಇದ್ದಾರೆ. ಹಾಗಾಗಿ ಮಕ್ಕಳಿಗೆ ರಂಗಭೂಮಿಯಲ್ಲಿ ನಾಟಕ ಹೇಳಿಕೊಡುವುದರಿಂದ

ಎಂತಹ ಅದ್ಭುತ ಪಾಠಗಳನ್ನು ಚಲನೆಯ ಜೊತೆಗೆ ಪಾಠ ಮಾಡುತ್ತೇವೆ. ಇದು ಬಹಳ ಅದ್ಭುತ ಅಲ್ಲ, ನಿಶ್ಚಲವಾಗಿ ಕಲಿಯುವುದು ಚಲನೆಯಿಂದ ಕಲಿಯುವುದಕ್ಕೂ ವ್ಯತ್ಯಾಸವಿದೆ. ಹಾಗಾಗಿ ಮಕ್ಕಳಿಗೆ ರಂಗಭೂಮಿ ಶಾಲಾ ಶಿಕ್ಷಣದಿಂದ ಬಂದರೆ ಅದು ತುಂಬಾ ಮುಖ್ಯವಾದದ್ದು ಎನ್ನುವುದು ನನ್ನ ಭಾವನೆ. ಇನ್ನು ಬೀದಿ ನಾಟಕಗಳು ಸಮಾಜಕ್ಕೆ ನಾವು ಹೇಳಬೇಕಾದಂತಹ ಹೋರಾಟದ ಕಥೆಗಳೇ ಆಗಬೇಕೆಂದೇನೂ ಇಲ್ಲ ನಾವು ಇಂದು ಜಾಗೃತಿಯ ಕಾರ್ಯಕ್ರಮಗಳನ್ನು, ಜಾಗೃತಿಯ ವಿಚಾರಗಳನ್ನು ಹೇಳುವ ಅಗತ್ಯವಿದೆ. ಇವತ್ತು ನಾವು ಬಹು ಮಾಧ್ಯಮಗಳ ಜೊತೆಗೆ ಬೇರೆ ಬೇರೆ ಬಹು ಮಾಧ್ಯಮಗಳಲ್ಲಿ ಮಿಂದು ಹೋಗಿದ್ದೇವೆ. ಆದರೆ ಈ ನಾಟಕಗಳು ಜೀವಂತ ಕಲೆ ಆಗಿರುವುದರಿಂದ ರಸ್ತೆಯಲ್ಲಿ ನಿಂತು ನಾಟಕ ಮಾಡಿದ ತಕ್ಷಣ, ಜೋರಾಗಿ ಕಿರಿಚಿದ ತಕ್ಷಣ ಇಲ್ಲಿ ಏನೋ ಕ್ರಿಯೆ ಘಟಿಸ್ತಾ ಇದೆ ಅಂತ ಜನ ನೋಡುತ್ತಾರೆ. ಹಾಗಾಗಿ ಇವೆರಡು ಸಮಾಜವನ್ನು ತಿದ್ದುವ, ತೀಡುವ ಅಥವಾ ಸಮಾಜಕ್ಕೆ ಬೇಕಾದ ವಿಚಾರಗಳನ್ನು ಹಂಚುವ ಒಂದು ಕ್ರಮ. ಹಾಗಾಗಿ ಮಕ್ಕಳ ರಂಗಭೂಮಿ ಇರಬಹುದು, ಬೀದಿ ನಾಟಕಗಳಿರಬಹುದು, ಆ ಕಾಲ ಎಂದಿಲ್ಲ ಈ ಕಾಲ ಎಂದಿಲ್ಲ ಎಲ್ಲಾ ಕಾಲದಲ್ಲೂ ಅಗತ್ಯ ಎಂಬುದನ್ನು ನಂಬಬೇಕು ಅಥವಾ ಒಪ್ಪಬೇಕು.

೧೬. ರಂಗ ನಿರ್ದೇಶನ ಮತ್ತು ನಿರ್ಮಾಣದ ಸವಾಲುಗಳೇನು?

ನಿರ್ದೇಶನದ ಸವಾಲು ಅಧ್ಯಯನ, ಅಭ್ಯಾಸ ಕ್ರಮ, ಆಳವಾದಂತಹ ತಿಳುವಳಿಕೆ, ಜೊತೆಗೆ ಜನರ ಪ್ರೇಕ್ಷಕರ ಮನೋಭಾವ. ಇವತ್ತು ನಮಗಿರುವ ಸಾಮಾಜಿಕ ಬಹುಮಾಧ್ಯಮಗಳಿಂದ ಆಚೆಗೆ ಕರೆತಂದು ನಾಟಕವನ್ನು ತೋರಿಸುವ ಸವಾಲು. ಆ ರೀತಿಯಲ್ಲಿ ನಾಟಕ ಮಾಡಬೇಕು. ಜೊತೆಗೆ ನಾವು ಹೇಳುವ ಕಥೆ ಎಂಥಹುದು? ಜನರು ಕೇಳಿದ ಕಥೆಯೇ? ತುಂಬಾ ಸವಾಲುಗಳಿವೆ. ಸವಾಲು ಜೊತೆಗೆ ನಾವು ಇವತ್ತು ಮಿಂದು ಹೋಗುತ್ತಿರುವ ಸೋಶಿಯಲ್ ಮೀಡಿಯಾ. ನಾವೆಲ್ಲಾ ಒಂದು ರೀತಿಯಲ್ಲಿ ಅದರ ದಾಸರಾಗಿದ್ದೇವೆ.

ನಾವು ಪ್ರೇಕ್ಷಕರನ್ನು ಕರೆದುಕೊಂಡು ಬರುವುದೇ ಮುಖ್ಯವಾದ ಸವಾಲು. ಆ ಮಟ್ಟಿಗೆ ವಿಚಾರ, ವಿನ್ಯಾಸ, ನಿರ್ದೇಶನ ಎಲ್ಲವೂ ಕೂಡ ಇರಬೇಕು. ಅದಕ್ಕೆ ತಕ್ಕಂತಹ ಸಂಗೀತ ಇತ್ಯಾದಿಗಳೆಲ್ಲವೂ ಬಹಳ ಮುಖ್ಯ. ಈ ಸವಾಲುಗಳ ಜೊತೆಗೆ ನಿರ್ಮಾಣದ ಸವಾಲು. ನಾಟಕ ಮಾಡಲು ಒಂದಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಆಗ ಒಂದು ನಾಟಕ ಶೋಗೆ ಎಷ್ಟು ಖರ್ಚು ಬರುತ್ತದೆ, ಚಿತ್ರ ವಿನ್ಯಾಸ ರಂಗಮಂದಿರ, ಬೆಳಕಿನ ವಿನ್ಯಾಸ ಇರಬಹುದು, ಕೆಲವು ಕಲಾವಿದರು ಅನ್ನಕ್ಕಾಗಿ ದುಡಿಯುತ್ತಿರುತ್ತಾರೆ. ಅವರಿಗೆ ಸಣ್ಣ ಮೊತ್ತವನ್ನಾದರೂ ಕೊಟ್ಟು ನಾಟಕ ಮಾಡಿಸಬೇಕಾಗುತ್ತದೆ. ಬಹಳ ಜನ ಉಚಿತವಾಗಿ ನಾಟಕ ಮಾಡಲಿ ಅಂತ ಬಯಸುತ್ತಾರೆ. ತುಂಬಾ ದೊಡ್ಡ ತಪ್ಪು. ನಾಟಕ ಖರ್ಚು ಐದರಿಂದ ಹತ್ತು ಸಾವಿರ ಬಂದಿರುತ್ತೆ. ಅವರು ೨೦೦೦ ಅಥವಾ ೩೦೦೦ ಕೈಗೆಟ್ಟು ಕಳಿಸುತ್ತಾರೆ. ಕಷ್ಟಪಟ್ಟು ಕಲಿತಿರುತ್ತೇವೆ ಎಂದು ಅನೇಕ ತಂಡಗಳು ಅಷ್ಟಕ್ಕೆ ನಾಟಕ ಮಾಡುತ್ತಾರೆ.

ನಮಗೆ ಅವಕಾಶ ಸಿಕ್ಕಿದ್ದೆ ಬಹಳ ಹೆಚ್ಚು ಎಂದು ಭಾವಿಸುತ್ತಾರೆ. ಇದೆಲ್ಲ ಬಹಳ ತಪ್ಪು. ಹಾಗಾಗಿ ಅವಕಾಶ ಎನ್ನುವುದರ ಜೊತೆಗೆ ಅವರಿಗೆ ಬದುಕಿನ ಅವಕಾಶವನ್ನು ಮಾಡುವ ಹಾಗೆ ಮಾಡಬೇಕು. ನಿರ್ಮಾಣ ಕೊಂದಿಷ್ಟು ಇನ್ವೆಸ್ಟ್ ಮಾಡಿರುತ್ತಾರೆ. ಪ್ರಯೋಗಕ್ಕೆ ಒಂದಿಷ್ಟು ಖರ್ಚಾಗಿರುತ್ತದೆ. ಹಾಕಿದ ಬಂಡವಾಳವೆಲ್ಲ ಸಿಕ್ಕದೆ ಹೋದರೆ ಕಲಾವಿದರಿಗೆ ಮುಂದಿನ ನಾಟಕ ಮಾಡಲು ಬಹಳ ಕಷ್ಟವಾಗುತ್ತದೆ. ಬದುಕು ಕಟ್ಟಿಕೊಳ್ಳುವುದು ಕಷ್ಟ ಎನಿಸುತ್ತದೆ. ಹಾಗಾಗಿ ನಾಟಕ ಮಾಡಿಸುವವರು ನಾಟಕ ನೋಡುವವರು ಈ ತರಹದ್ದನ್ನು ಗಮನಿಸಬೇಕಾಗುತ್ತದೆ. ಅದಕ್ಕಾಗಿ ನಾವು ಕೋಟ್ಯಂತರ ರೂಪಾಯಿ ತೆತ್ತ ಬೇಕೆಂದೇನು ಇಲ್ಲ, ಅದಕ್ಕೆ ಹಾಕಿದ ಖರ್ಚು ವೆಚ್ಚವನ್ನಾದರೂ ಕೊಡಬೇಕು ಎಂಬುದು ಸ್ಪಷ್ಟವಾದ ನಂಬಿಕೆ. ಇಲ್ಲವಾದರೆ ಕಲಾವಿದ ಫ್ರಸ್ಟ್ರೇಟ್ ಆಗುತ್ತಾನೆ. ತಂಡ ನಿಧಾನವಾಗಿ ಮುಚ್ಚೋಗುತ್ತೆ. ನಾಟಕ ಮಾಡುವವರ ಸಂಖ್ಯೆ ಕಡಿಮೆಯಾಗುತ್ತೆ. ಹಾಗಾಗಿ ನಿರ್ಮಾಣ ಮತ್ತು ನಿರ್ದೇಶನದ ಬಹಳ ದೊಡ್ಡ ಸವಾಲುಗಳ ನಡುವೆ ಇವತ್ತು ಹೊಸ ತಲೆಮಾರಿನ ಯುವಕರು ತಮ್ಮ ಆಸಕ್ತಿ, ಅಥವಾ ತುಂಬಾ ಜನ ತಮಗಾಗುತ್ತಿರುವ ಮೆಂಟಲ್ ಪ್ರಶರ್ ಅನ್ನು ಕಳೆದುಕೊಳ್ಳಲಿಕ್ಕೆ ತಾವೇ ಹಣವನ್ನು ಹಾಕಿಕೊಂಡು ತಾವೇ ಹಣವನ್ನು ವ್ಯಯಿಸಿಕೊಂಡು ರಂಗಭೂಮಿ ಕಡೆ ಬರ್ತಾ ಇದ್ದಾರೆ.

ನವರಂಗಭೂಮಿ, ನವವೃತ್ತಿರಂಗಭೂಮಿ ಎನ್ನುವ ರೀತಿಯಲ್ಲಿ ಇವತ್ತು ರಂಗಭೂಮಿ ಕ್ಷೇತ್ರ ವ್ಯಾಪಕವಾಗಿ ಬೆಳೆಯುತ್ತಿರುವುದನ್ನು ನೋಡಬಹುದು. ಪುಸ್ತಕಗಳು ಹಾಗೆ ದುಡ್ಡು ಕೊಟ್ಟು ಕೊಂಡುಕೊಳ್ಳುವುದಕ್ಕಿಂತಲೂ ಉಚಿತವಾಗಿ ಕೊಟ್ಟರೆ ಓದುತ್ತೇವೆ ಎನ್ನುವ ಅನೇಕ ಓದುಗರು ಕೂಡ ಪುಸ್ತಕ ಸಮಾರಂಭಗಳಲ್ಲಿ ಉಚಿತವಾಗಿ ಕೊಡಲೆಂದು ಬಯಸುತ್ತಾರೆ. ಹಾಗಲ್ಲ ಕಡೆ ಪಕ್ಷ ಅದಕ್ಕೆ

ದಕ್ಕಿಸಬಹುದಾದಂತಹದ್ದನ್ನು ದಕ್ಕಿಸಬೇಕು. ಎಲ್ಲಾ ದೃಷ್ಟಿಯಲ್ಲಿ ಕನ್ನಡ ರಂಗಭೂಮಿ ಅದು ಅನೇಕ ಒತ್ತಡಗಳು ಸಂಕಷ್ಟಗಳು ಸಂಘರ್ಷಗಳ ನಡುವೆ ತುಂಬಾ ಹುಲುಸಾದ ಬೆಳೆ ಬೆಳೆಯುತ್ತಿದೆ. ಯಾವ ಕಲಾಕೃತಿ ಉಳಿಯುತ್ತೆ, ಯಾವುದು ಬೆಳೆಯುತ್ತೆ ಎಂಬುದು ಪ್ರೇಕ್ಷಕ ಆ ಕಲಾಕೃತಿಯ ಸತ್ವ ಮತ್ತು ಅಕಲಾಕೃತಿಯ ಶಕ್ತಿಯಿಂದ ನಿರ್ಧಾರವಾಗುತ್ತದೆ.



ಸಂದರ್ಶಕರು: ಅನಿತ ಕೆ.ವಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ್ತ
ವಸಂತನಗರ, ಬೆಂಗಳೂರು
anithalakshmi8kv@gmail.com

ಶ್ರೀ ತುಕಾರಾಮ ಏನೆಕಲ್ಲು (ಕುಸುಮ ಸಾರಂಗ)

ಸಂದರ್ಶಕರು: ಡಾ. ಸೀತಾರಾಮ ಪಿ.



ದ.ಕ. ಜಿಲ್ಲೆ ಕಡಬ ತಾಲೂಕು ಏನೆಕಲ್ಲು ಗ್ರಾಮದ ಉಡುದೋಳಿ ಮನೆ ಶ್ರೀ ಕುಶಾಲಪ್ಪ ಗೌಡ ಮತ್ತು ಶ್ರೀಮತಿ ಗಿರಿಜ ದಂಪತಿಗಳ ಸುಪುತ್ರನಾಗಿ ದಿನಾಂಕ ೦೪–೦೬–೧೯೫೪ ರಲ್ಲಿ ಜನಿಸಿರುವ ಶ್ರೀ ತುಕಾರಾಮ ಏನೆಕಲ್ಲು ಇವರು ಸ.ಹಿ.ಪ್ರಾ. ಶಾಲೆ ಏನೆಕಲ್ಲಿನಲ್ಲಿ ಪ್ರಾರ್ಥಮಿಕ ಶಿಕ್ಷಣ, ಸ.ಪ.ಪೂ. ಕಾಲೇಜು ಕೊಂಬೆಟ್ಟಿನಲ್ಲಿ ಪ್ರೌಢಶಿಕ್ಷಣ, ವಿವೇಕಾನಂದ ಕಾಲೇಜು ಪುತ್ತೂರಿನಲ್ಲಿ ಪಿ.ಯು.ಸಿ ಮತ್ತು ಪದವಿ ಶಿಕ್ಷಣ ಪಡೆದು, ಬೆಂಗಳೂರು ವಿಶ್ವವಿದ್ಯಾನಿಲಯ ದಿಂದ ಸ್ನಾತಕೋತ್ತರ ಎಂ.ಪಿ.ಎಡ್. ಪದವಿಯನ್ನು ಪಡೆದಿರುತ್ತಾರೆ. ಸ.ಪ.ಪೂ. ಕಾಲೇಜು ಸುಳ್ಯದಲ್ಲಿ ಎರಡು ವರ್ಷ ಸೇವೆ ಸಲ್ಲಿಸಿ, ಕೆ.ಎಸ್.ಎಸ್. ಕಾಲೇಜು ಸುಬ್ರಹ್ಮಣ್ಯದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾಗಿ ೨೯ ವರ್ಷ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿರುತ್ತಾರೆ. ಕೆ.ಎಸ್.ಎಸ್. ಕಾಲೇಜಿನ 'ಕುಸುಮ ಸಾರಂಗ' ರಂಗಭೂಮಿ ತಂಡದ ರಂಗನಿರ್ದೇಶಕರಾಗಿ ೧೯೭೨ರಿಂದ ೨೦೧೪ರ ವರೆಗೆ ನಿರಂತರವಾಗಿ ೨೭ ನಾಟಕಗಳನ್ನು ರಾಜ್ಯದ ಬೇರೆ ಬೇರೆ ನಿದೇಶಕರ ಮೂಲಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರದರ್ಶನ ನೀಡಿರುವುದಲ್ಲದೇ, ವಿಶ್ವವಿದ್ಯಾನಿಲಯ ಮಟ್ಟದ ನಾಟಕೋತ್ಸವ ಸ್ಪರ್ಧೆಯಲ್ಲಿ ೬ ನಾಟಕ ಪ್ರಥಮ ಸ್ಥಾನ ಪಡೆದಿರುತ್ತದೆ. ಸಿರಿಸಂಪಿಗೆ, ಮಹಾಮಾಯಿ, ಸಾಹೇಬರು ಬರುತ್ತಾರೆ, ಚಿತ್ರಪಟ ನಾಟಕಗಳು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತದೆ. 'ಕುಸುಮಸಾರಂಗ' ಸಾಂಸ್ಕೃತಿಕ ತಂಡದಲ್ಲಿ ಒಟ್ಟು ೨೫೦ಕ್ಕೂ ಮಿಕ್ಕಿ ವಿದ್ಯಾರ್ಥಿಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪಳಗಿಸಿದ ಕೀರ್ತಿ ಇವರದ್ದು. ಸ್ವತಃ ಇವರು ರಂಗ ನಟನಾಗಿ ಅಭಿನಯಿಸಿದ್ದಾರೆ.

ಶ್ರೀ ತುಕಾರಾಂ ಏನೆಕಲ್ಲು ಅವರು ಕನ್ನಡ ಸಾಹಿತ್ಯ ಪರಿಷತ್‌ನ ತಾಲೂಕು ಮತ್ತು ಜಿಲ್ಲಾ ಪ್ರಶಸ್ತಿ, ೨೦೧೧ ರಲ್ಲಿ ಕರ್ನಾಟಕ ರಾಜ್ಯ ನಾಟಕ ಅಕಾಡೆಮಿಯಿಂದ ರಾಜ್ಯ ಪ್ರಶಸ್ತಿಯನ್ನು ರಂಗಭೂಮಿ ಸೇವೆಗಾಗಿ ಪಡೆದಿರುತ್ತಾರೆ. ಇವರನ್ನು ಪ್ರಶ್ನೆಗಳೊಂದಿಗೆ ಸಂದರ್ಶಿಸಿ ಅವರ ಜ್ಞಾನ ಮತ್ತು ಅನುಭವವನ್ನು ತೆರೆದಿಡಲಾಯಿತು.

ಸಂದರ್ಶನ :

ರಂಗಭೂಮಿಯ ಇತಿಹಾಸವೇನು? ಅದು ಹೇಗೆ ಬೆಳೆದು ಬಂತು?

ನಾಟಕ ಅಭಿನಯದ ಮೂಲ ಶಿಲಾಯುಗ ಕಾಲಕ್ಕೆ ಹೋಗುತ್ತದೆ. ಬೇಟೆಯಾಡಿ ಬರುವ, ಮಾತು ಬರದ ಶಿಲಾಯುಗದ ಮಾನವ ತನ್ನವರಿಗೆ ಬೇಟೆಯ ವಿವರಣೆಯನ್ನು ಅಭಿನಯದ ಮೂಲಕ ತೋರಿಸುತ್ತಿದ್ದರು. ಬಹುಶಃ ಮುಂದೆ ಮಾತು ಕಲಿತ ಮಾನವ ಅಭಿನಯ ಕೇಂದ್ರಿಕರಿಸಿ ರಂಗಭೂಮಿಯನ್ನು ಬೆಳೆಸಿದೆ. ರಂಗಭೂಮಿಯು ವಿಕಾಸದ ಹಿನ್ನೆಲೆಯಿಂದ ಬೆಳೆದು ಬಂದಿದೆ. ಇದು ಅಭಿವೃದ್ಧಿಯ ಸಂಕೇತ.

ಮಾನವ ನಾಗರೀಕತೆಯ ಬೆಳವಣಿಗೆಗೆ ರಂಗಭೂಮಿ ಕೊಡುಗೆಯನ್ನು ವಿವರಿಸಿ.

ರಂಗಭೂಮಿ ಶಿಕ್ಷಣದ ಅವಿಭಾಜ್ಯ ಅಂಗವಾಗಬೇಕು. ಇದು ನೋವು, ನಲಿವು, ಕಷ್ಟಗಳನ್ನೆಲ್ಲಾ ಕಲಿಸಿಕೊಡುತ್ತದೆ. ಒಬ್ಬ ವಿದ್ಯಾರ್ಥಿ ಸರ್ವತ್ತೋಮುಖ ಬೆಳವಣಿಗೆಯಲ್ಲಿ ಓದು, ಕ್ರೀಡೆಯೊಂದಿಗೆ ರಂಗಾನುಭವವು ಬಹಳ ಮುಖ್ಯ. ಈ ರಂಗಭೂಮಿ ಮನುಷ್ಯನೊಳಗೆ ಭಾವಾನುಬಂಧವನ್ನು ಉಂಟು ಮಾಡುತ್ತದೆ. ಬಡತನ, ಶ್ರೀಮಂತಿಕೆ, ಜಾತಿ ಧರ್ಮಗಳನ್ನು ಮೀರಿ ಎಲ್ಲವನ್ನೂ ಒಳಗೊಳ್ಳಿಸಿಕೊಂಡು ಸಮಾನ ಭಾವವನ್ನು ಮೂಡಿಸಿ ಉತ್ತಮ ನಾಗರೀಕ ಸಮಾಜವನ್ನು ಕಟ್ಟಿಕೊಡುತ್ತದೆ.

ವಿದ್ಯಾರ್ಥಿಗಳಿಗೆ ರಂಗತರಬೇತಿಯಿಂದ ಆಗುವ ಉಪಯೋಗಗಳನ್ನು ತಿಳಿಸಿ.

ರಂಗಭೂಮಿ ಬದುಕನ್ನು ಕಲಿಸಿಕೊಡುತ್ತದೆ.. ಇದು ಶಿಸ್ತನ್ನು, ಸಂಯಮವನ್ನು ಬೆಳೆಸುತ್ತದೆ. ನಮ್ಮಲ್ಲಿ 'ಕುಸುಮ ಸಾರಂಗದಡಿ ತರಬೇತಿ ಪಡೆದ ವಿದ್ಯಾರ್ಥಿಗಳು ಈ ರೀತಿ ಬೆಳವಣಿಗೆಯನ್ನು ಕಂಡಿರುವುದನ್ನು ಕಾಣಬಹುದು. ಅವರೆಲ್ಲಾ ಒಂದೊಳ್ಳೆ ಬದುಕನ್ನು ಕಟ್ಟಿಕೊಂಡಿದ್ದಾರೆ. ಸಾಮಾಜಿಕ ಅರಿವನ್ನು ವಿಸ್ತರಿಸುತ್ತದೆ. ಎಲ್ಲರೊಟ್ಟಿಗೆ ಹೊಂದಾಣಿಕೆಯೊಂದಿಗೆ ಬದುಕುವುದನ್ನು ಕಲಿಸುತ್ತದೆ.

ಸಾಂಪ್ರದಾಯಿಕ ರಂಗಭೂಮಿಗಿಂತ ಆಧುನಿಕ ರಂಗವು ಹೇಗೆ ಭಿನ್ನವಾಗಿದೆ?

ಸಾಂಪ್ರದಾಯಿಕ ನಾಟಕಗಳು ಹೆಚ್ಚಾಗಿ ಗಂಭೀರ ವಸ್ತು ವಿಷಯಗಳನ್ನು ಒಳಗೊಂಡಿರುತ್ತದೆ. ಇದು ಪೌರಾಣಿಕ, ಜನಪದ, ಐತಿಹಾಸಿಕ ವಿಷಯಗಳನ್ನೊಳಗೊಂಡಿರುತ್ತದೆ. ಇದಕ್ಕೆ ರಂಗ ವಿನ್ಯಾಸಗಳು ಬೇಕಾಗಿರುತ್ತದೆ. ಆಧುನಿಕ ರಂಗಭೂಮಿಯು ಸಮಕಾಲೀನ ವಿಷಯಗಳನ್ನು ಅಂದರೆ ರಾಜಕೀಯ, ಸಾಮಾಜಿಕ ವಿಷಯಗಳನ್ನು ಹಾಸ್ಯಬೆರೆತ ಧ್ವನಿಯಲ್ಲಿ ಪ್ರಸ್ತುತಪಡಿಸುತ್ತದೆ. ಆಧುನಿಕ ರಂಗಭೂಮಿಯಲ್ಲಿ ಕೆಲವೊಂದು ವಸ್ತು ದೃಶ್ಯಗಳನ್ನು ಅಭಿನಯದ ಮೂಲಕ ತೋರಿಸುತ್ತದೆ. ಉದಾಹರಣೆಗೆ ಬಾಗಿಲು ತೆರೆಯುವ ದೃಶ್ಯವನ್ನು ಅಭಿನಯದ ಮೂಲಕ ತೋರಿಸಲಾಗುತ್ತದೆ. ಆದರೆ ಸಾಂಪ್ರದಾಯಿಕ ರಂಗಭೂಮಿಯಲ್ಲಿ ಇಂತಹ ದೃಶ್ಯಕ್ಕೆ ವೇದಿಕೆಯಲ್ಲಿ ವಸ್ತು ವಿನ್ಯಾಸಗೊಳಿಸಲಾಗುತ್ತದೆ. ಕುಸುಮಸಾರಂಗದಲ್ಲಿ 'ಸಾಹೇಬ್ರು ಬರುತ್ತಾರೆ', 'ಮಲ್ಲಮ್ಮನ ಮನೆ ಹೋಟ್ಲು' ಆಧುನಿಕ ರಂಗಭೂಮಿಗೆ ಸೇರಲ್ಪಟ್ಟಿದೆ.

ರಂಗ ನಿರ್ದೇಶನ ಮತ್ತು ನಿರ್ಮಾಣದ ಸವಾಲುಗಳು ಯಾವುವು?

ನಟರ ಕೊರತೆ ಹಳ್ಳಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕೆಲವೊಮ್ಮೆ ರಂಗಭೂಮಿಯ ಬಗ್ಗೆ ಜನರಿಗೆ ತಾತ್ಸಾರ ಮನೋಭಾವ ಇರುತ್ತದೆ. ಮಹಿಳೆಯರನ್ನು ಅಭಿನಯಕ್ಕೆ ಕಳುಹಿಸಲು ಹಿಂದೇಟು ಹಾಕುತ್ತಾರೆ. ಇದರೊಂದಿಗೆ ಹಣಕಾಸಿನ ಕೊರತೆಯು ಇರುತ್ತದೆ. ಸಮಕಾಲೀನ ಸನ್ನಿವೇಶಗಳಲ್ಲಿ ವಸ್ತು ವಿಷಯವನ್ನು ಆಯ್ಕೆ ಮಾಡಿಕೊಳ್ಳುವಾಗ ಬಹಳ ಜಾಗೃತರಾಗಿರಬೇಕಾಗುತ್ತದೆ. ಪ್ರವಾಸಿ ರಂಗಭೂಮಿ ತಂಡಗಳಿಗೆ ಕೆಲವೊಂದು ಕಡೆ ಸೂಕ್ತವಾದ ವಸ್ತುಗಳು ರಂಗಸಜ್ಜಿಕೆಗೆ ದೊರಕದೇ ಇರಬಹುದು.

ಹೊಸಬರಿಗೆ ರಂಗಪ್ರವೇಶಕ್ಕೆ ಅಗತ್ಯವಾಗಿ ಇರಬೇಕಾದ ಪೂರ್ವ ತಯಾರಿಗಳೇನು?

ಹೊಸಬರು ರಂಗಭೂಮಿಯ ಹಿನ್ನೆಲೆ ತಿಳಿದುಕೊಂಡಿರಬೇಕು. ಬಹಳ ಮುಖ್ಯವಾಗಿ ಆಸಕ್ತಿ ಬೇಕು. ಇಲ್ಲಿ ಕಲಿಕೆಗೆ ತುಂಬಾ ಅವಕಾಶಗಳಿವೆ. ಕಲಿಯುತ್ತಾ ರಂಗಭೂಮಿ ಜ್ಞಾನ ವಿಸ್ತರಿಸಿ ಪ್ರಬುದ್ಧತೆ ಪಡೆದುಕೊಳ್ಳಬೇಕು.

ಮಕ್ಕಳ ನಾಟಕ ಮತ್ತು ಬೀದಿನಾಟಕಗಳ ಬಗ್ಗೆ ತಿಳಿಸಿ

ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದಲೇ ನಾಟಕ ವಿಷಯವನ್ನು ಕಡ್ಡಾಯಗೊಳಿಸಬೇಕು. ಬಾಲ ಕಲಾವಿದರು ಅರಿವನ್ನು ವಿಸ್ತರಿಸಿಕೊಳ್ಳುತ್ತಾರೆ. ಶಿಸ್ತನ್ನು ಕಲಿಯುತ್ತಾರೆ. ಹೊಂದಾಣಿಕೆ ಮನೋಭಾವ ಬೆಳೆಸಿಕೊಳ್ಳುತ್ತಾರೆ. ಸಮಾಜಕ್ಕೆ ಒಳ್ಳೆಯ ಆಸ್ತಿಯಾಗುತ್ತಾರೆ. ಮಕ್ಕಳ ನಾಟಕವನ್ನು ಮಕ್ಕಳು ನೋಡಿದಾಗ ಅದು ಇನ್ನಷ್ಟು ಪರಿಣಾಮಕಾರಿಯಾಗುತ್ತದೆ., ಅದು ಒಂದೊಳ್ಳೆ ಸಮಾಜಮುಖಿ ವಿಷಯವನ್ನು, ಸೃಜನಶೀಲ ಅಂಶವನ್ನು ಒಳಗೊಂಡಿರಬೇಕು.

ಬಹುಶಃ ಮಕ್ಕಳಿಗೆ ಮೊದಲಿಗೆ ಬೀದಿ ನಾಟಕವನ್ನು ಕಲಿಸಬೇಕು. ಇದು ಸಮಾಜವನ್ನು ಎದುರಿಸಲು ಸಹಕಾರಿ. ಬೀದಿ ನಾಟಕ ಹೆಚ್ಚು ಪರಿಣಾಮಕಾರಿ. ಇದರ ಮುಖಾಂತರ ಆರೋಗ್ಯ, ಶಿಕ್ಷಣ, ಮೌಢ್ಯತೆಗಳ ಕುರಿತು ಜಾಗೃತಿ ಮೂಡಿಸಲು ಸಾಧ್ಯ. ಸಮಾಜದ ಬೆಳವಣಿಗೆಗೆ ಹಾಗೂ ವ್ಯಕ್ತಿಯ ಬೆಳವಣಿಗೆಗೆ ಇದು ಅನುಕೂಲಕರ.

ಕತೆ, ಕಾದಂಬರಿಗಳನ್ನು ರಂಗಕ್ಕೆ ಅಳವಡಿಸುವಾಗ ಇರಬೇಕಾದ ಎಚ್ಚರವನ್ನು ತಿಳಿಸಿ.

ಕತೆ ಕಾದಂಬರಿಗಳನ್ನು ಅಳವಡಿಸುವಾಗ ಆ ಮೂಲ ಕೃತಿಗೆ ಚ್ಯುತಿ ಬರದ ಹಾಗೆ ನೋಡಿಕೊಳ್ಳಬೇಕು.. ಇಲ್ಲದ್ದನ್ನು ತುರುಕಿಸಬಾರದು ಮತ್ತು ವಿಷಯ ತಿರುಚಲು ಹೋಗಬಾರದು. ಕೆಲವೊಂದು ವಿಷಯಗಳು ಬೇಕಾಗಿಲ್ಲ ಅಂದಾಗ ಬಿಟ್ಟು ಬಿಡಬಹುದು.

ಐತಿಹಾಸಿಕ ವಿಷಯಗಳನ್ನು ರಂಗಭೂಮಿಯಲ್ಲಿ ಹೇಗೆ ಪ್ರದರ್ಶಿಸಬಹುದು?

ಇವತ್ತಿನ ಕಾಲದಲ್ಲಿ, ಐತಿಹಾಸಿಕ ಘಟನಾವಳಿಗಳನ್ನು ರಂಗಭೂಮಿಗೆ ಆಯ್ದುಕೊಳ್ಳುವಾಗ ಜಾಗೃತರಾಗಿರಬೇಕಾಗುತ್ತದೆ. ಯಾಕೆಂದರೆ ಐತಿಹಾಸಿಕ ವ್ಯಕ್ತಿಯನ್ನು ಅಥವಾ ಘಟನೆಯನ್ನು ಆಯ್ದುಕೊಂಡು ಪ್ರದರ್ಶಿಸಲ್ಪಟ್ಟಾಗ ಅದನ್ನು ಒಪ್ಪದ ಮನಸ್ಥಿತಿಯವರು ವಿವಾದವನ್ನುಂಟು ಮಾಡಬಹುದು. ಆದರೆ ಇತಿಹಾಸವನ್ನು ಇತಿಹಾಸವನ್ನಾಗಿಯೇ ಜನರು ಸ್ವೀಕರಿಸಬೇಕು. ನಮ್ಮ ಸಿದ್ದಾಂತಗಳಿಗೆ ಒಪ್ಪಲ್ಲ ಅಂತ ಅದನ್ನು ವಿರೋಧಿಸಬಾರದು. ಅದೇನಿದ್ದರೂ, ಐತಿಹಾಸಿಕ ವಿಷಯಗಳನ್ನು ಮನೋರಂಜನೆ ಮತ್ತು ಗಂಭೀರ ವಿಷಯದ ನೆಲೆಯಲ್ಲಿ ಆಯ್ದುಕೊಳ್ಳಲು ಸೂಕ್ತ ಮತ್ತು ರಂಗಭೂಮಿ ಮಾಧ್ಯಮದ ಮುಖಾಂತರ ಜನರಿಗೆ ಐತಿಹಾಸಿಕ ವಿಷಯಗಳನ್ನು ದಾಟಿಸಬೇಕು. ಅದರಲ್ಲೂ ದೇಶದ ಸ್ವಾತಂತ್ರ್ಯ ಹೋರಾಟದ ವಿಚಾರಗಳನ್ನು ಜನರಿಗೆ ತಲುಪಿಸಬೇಕು.



ಕರ್ನಾಟಕ ರಂಗಭೂಮಿಯ ಇತ್ತೀಚಿನ ಮಹತ್ತರವಾದ ಬೆಳವಣಿಗೆಗಳ ಬಗ್ಗೆ ತಿಳಿಸಿ.

ಒಳ್ಳೆಯ ರೀತಿಯಲ್ಲಿದೆ. ಹಿಂದೆ ಶಿವಮೊಗ್ಗದ ನೀನಾಸಂ, ಮೈಸೂರಿನ ರಂಗಾಯಣ ಮೊದಲಾದ ಥಿಯೇಟರ್ ಮಾತ್ರ ಇತ್ತು. ಇವತ್ತು ಮಂಡ್ಯದಲ್ಲಿ ಮಂಡ್ಯ ರಮೇಶ್ ಅವರ 'ನಟನ', ಕಾರ್ಕಳದಲ್ಲಿ ಸರ್ಕಾರದಿಂದ ಆರಂಭಿಸಲ್ಪಟ್ಟ ಯಕ್ಷರಂಗಾಯಣ, ಸುಳ್ಯದಲ್ಲಿ ಜೀವನ್‌ರಾಮ್‌ರಿಂದ ಮುನ್ನಡೆಸಲ್ಪಡುತ್ತಿರುವ 'ರಂಗಮನೆ' ಮೊದಲಾದವುಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ ಕಾಲೇಜುಗಳಲ್ಲಿ ರಂಗಭೂಮಿ ಚಟುವಟಿಕೆ ಕಡಿಮೆಯಾಗುತ್ತಿದೆ. ಕೆ.ಎಸ್.ಎಸ್. ಕಾಲೇಜಿನ ಕುಸುಮಸಾರಂಗ ಕೂಡ ಇತ್ತೀಚಿನ ವರ್ಷಗಳಲ್ಲಿ ನಾಟಕಗಳನ್ನು ಹೊರತರುತ್ತಿಲ್ಲ ಎಂಬುದು ವಿಷಾದನೀಯ.

ಸಂದರ್ಶಕರು : ಡಾ. ಸೀತಾರಾಮ ಪಿ
ಅತಿಥಿ ಉಪನ್ಯಾಸಕರು
ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜು ನೆಲ್ಯಾಡಿ
೫೭೪೨೨೯

ಕೆ. ಎಸ್. ಡಿ. ಎಲ್. ಚಂದ್ರು (ಜಿ. ಹೆಚ್. ಚಂದ್ರಶೇಖರ್)

(ನಟ, ನಿರ್ದೇಶಕ)

ಸಂದರ್ಶಕರು: ಡಾ. ಚೇತನಾ ಹೆಗಡೆ



ಕೆ.ಎಸ್.ಡಿ.ಎಲ್ ಚಂದ್ರು ಅವರು ನಾಲ್ಕು ದಶಕಗಳಿಂದ ನಿರಂತರವಾಗಿ ಹವ್ಯಾಸಿ ರಂಗಭೂಮಿ, ಕಾರ್ಮಿಕ ರಂಗಭೂಮಿ, ಕಾಲೇಜು ರಂಗಭೂಮಿಯೊಂದಿಗೆ ರಂಗಕರ್ಮಿಯಾಗಿ ಹೆಜ್ಜೆಗಳನ್ನೂರುತ್ತ ಬಂದವರು. ಈ ಬಹುಮುಖಿ ಪ್ರತಿಭೆ ನಟನಾಗಿ, ನಿರ್ದೇಶಕನಾಗಿ, ಛಾಯಾಗ್ರಾಹಕನಾಗಿ ರಂಗಭೂಮಿ, ಕಿರುತೆರೆ, ಬೆಳ್ಳಿತೆರೆ, ಸಾಕ್ಷ್ಯ ಚಿತ್ರಗಳಲ್ಲಿ ತಮ್ಮ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ೨೦ ಮೇ ೧೯೬೩ ರಲ್ಲಿ ಎಂ. ಹೊನ್ನಯ್ಯ ಮತ್ತು ಲಕ್ಷ್ಮಮ್ಮ ದಂಪತಿಗಳ ದ್ವಿತೀಯ ಪುತ್ರನಾಗಿ ಬೆಂಗಳೂರಿನಲ್ಲಿ ಜನಿಸಿದರು. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಯಲ್ಲಿ ಉದ್ಯೋಗಸ್ಥರಾಗಿದ್ದ ಚಂದ್ರು ಅವರು ಪ್ರಸ್ತುತ ನಿವೃತ್ತ ಜೀವನ ನಡೆಸುತ್ತಿದ್ದಾರೆ. ರಂಗಭೂಮಿ ಇವರ ಆಸಕ್ತಿಯ ಕ್ಷೇತ್ರ. ಯಾವುದೇ ಸಾಂಪ್ರದಾಯಿಕ ರಂಗ ತರಬೇತಿ ಹಾಗೂ ರಂಗ ಶಿಕ್ಷಣ ಪಡೆಯದೆ ತಮ್ಮ ಆಸಕ್ತಿಯನ್ನೇ ತಳಹದಿಯಾಗಿಸಿಕೊಂಡವರು. ತಮ್ಮ ಗೆಳೆಯರೊಂದಿಗೆ (ಅಮರ್ ಸಿ .ವಿ, ಮಂಜುನಾಥ್, ಕನಕರಾಜ್, ಶೇಷಾದ್ರಿ, ಗಂಗಾಧರ್, ಗೋಪಿ, ಸುದರ್ಶನ್ ಮುಂತಾದವರು) ಸೇರಿ 'ರೂಪಾಂತರ' ಎಂಬ ಹವ್ಯಾಸಿ ರಂಗ ತಂಡವನ್ನು ಕಟ್ಟಿದರು. ಇವರ ರಂಗಪ್ರಯೋಗಗಳು ನಾಡಿನಾದ್ಯಂತ ಮಾತ್ರವಲ್ಲದೆ ದೆಹಲಿ, ಲಕ್ನೋ, ಸಿಮ್ಲಾ, ಫರೀದಾಬಾದ್, ಮುಂಬೈ, ಚೆನ್ನೈ, ಹೈದರಾಬಾದ್, ತಿರುಪತಿ ಮುಂತಾದ ಪ್ರದೇಶಗಳಲ್ಲಿ ಆಯೋಜಿಸಿದ್ದ ನಾಟಕೋತ್ಸವದಲ್ಲಿ ಪ್ರದರ್ಶನ ನೀಡಿದೆ.

ಕೆ.ಎಸ್.ಡಿ.ಎಲ್ ನಲ್ಲಿ ಉದ್ಯೋಗಿ ಆಗಿದ್ದ ಚಂದ್ರು ಅವರು ಕೆ.ಎಸ್.ಡಿ.ಎಲ್, ಮೈಕೋ, ಕೆ.ಇ.ಬಿ ಸಚಿವಾಲಯದ ಸಿಬ್ಬಂದಿಗಳಿಗೆ, ರೂಪಾಂತರ ತಂಡದವರಿಗೆ, ಸಾಣೇಹಳ್ಳಿ ಶಿವಸಂಚಾರದ ಕಲಾವಿದರಿಗೆ, ಎಂ.ಇ.ಎಸ್ ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಹಲವಾರು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಕೊಕ್ಕೆ, ಹೆಜ್ಜೆಗಳು, ಮಳೆಬೀಜ, ಕರ್ವಾಲೊ, ಮುಸ್ಸಂಜೆಯ ಕಥಾ ಪ್ರಸಂಗ, ಮೈ ಮನಗಳ ಸುಳಿಯಲ್ಲಿ, ಬಡೇಸಾಬು ಪುರಾಣ, ಗಲ್ಬಸ್ಕಿ, ಯಹೂದಿ ಹುಡುಗಿ, ರಾಮಧಾನ್ಯ, ಟ್ರೈನ್ ಟು ಪಾಕಿಸ್ತಾನ್, ಕರಿಸಿದ್ಧ, ಚಕ್ರರತ್ನ, ಮತ್ಸ್ಯಗಂಧಿ, ಮೋಹನ ಸ್ವಾಮಿ, ಏಕಲವ್ಯ, ಆರದಿರಲಿ ಬೆಳಕು, ಹಡೆದವ್ವ ಬರೆದ ಹಣೆಬರಹ ಮುಂತಾದ ನಾಟಕಗಳ ನಿರ್ದೇಶನದಲ್ಲಿ ಪ್ರೇಕ್ಷಕರಿಂದ ಸೈ ಎನ್ನಿಸಿಕೊಂಡಿದ್ದಾರೆ. ಗೊರೂರು ಕಥಾ ಪ್ರಪಂಚ, ದೀಪಾವಳಿ ನಸುಕಿನಲ್ಲಿ , ಬಾಂಧವ್ಯ, ಚಾಪ್ಲಿನ್, ನೀನು ಅಮರ, ಹಾಲು ಜೇನು, ಚಿತ್ತಾರದ ಬದುಕು, ಮಹಾನದಿ, ಊರ್ವಶಿ, ಪಲಾಯನ, ಶಿವಯೋಗಿ ಸಿದ್ಧರಾಮ, ಅಕ್ಬರ ಬಿರಬಲ್, ರಕ್ತ ಧ್ವಜ, ಆಗಸ್ಟ್ ಒಂಬತ್ತು ಮುಂತಾದ ಧಾರಾವಾಹಿಗಳಿಗೆ ನಿರ್ದೇಶನ ಮಾಡಿದ್ದಾರೆ. ಘನ ತ್ಯಾಜ್ಯ ನಿರ್ವಹಣೆ, ಪರಿಶಿಷ್ಟ ಪಂಗಡದ ಸಾಮಾಜಿಕ ಸಬಲೀಕರಣ, ನಮ್ಮ ಕಾಡು, ಅಂಬೇಡ್ಕರ್ ವಸತಿ ಯೋಜನೆ, ಸಾವಿನ ಹೊಗೆ, ಮುಖ್ಯಮಂತ್ರಿ ವಿದ್ಯಾ ನಿಧಿ ಯೋಜನೆ, ಮುಖ್ಯಮಂತ್ರಿ ಇ ಕಾಮರ್ಸ್ ಯೋಜನೆ, ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ಮುಂತಾದ ೩೫ ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ.

ನಿರ್ದೇಶಕನಾಗಿ ಮಾತ್ರವಲ್ಲದೆ ನಟನಾಗಿಯೂ ಛಾಪು ಮೂಡಿಸಿರುವ ಚಂದ್ರು ಅವರು 'ಗಾಂಧಿ ವೇಷ' ಕಲಾತ್ಮಕ ಚಲನಚಿತ್ರದಲ್ಲಿ ನಾಯಕನಟನಾಗಿ ಅಭಿನಯಿಸಿದರೆ, ಡಾ ರಾಜ್ ಕುಮಾರ್ ನಿರ್ಮಾಣ ಸಂಸ್ಥೆ ನಿರ್ಮಿಸಿದ 'ಹೃದಯ ಹೃದಯ' ಚಲನಚಿತ್ರದ ಕಥೆ ಮತ್ತು ಸಹ ನಿರ್ದೇಶನದಲ್ಲಿ ಕೆಲಸ ಮಾಡಿದ್ದಾರೆ. ಅಮಾಸ, ಹೆಜ್ಜೆಗಳು, ಮೊಗ್ಗಿನ ಜಡೆ, ಗಿಳಿಯು ಪಂಜರದೊಳಿಲ್ಲ, ಕಾಮಧೇನು, ಕಿರಗೂರಿನ ಗಯ್ಯಾಳಿಗಳು, ತಿಪ್ಪಾರಳ್ಳಿ ತರಲೆಗಳು, ಮಾಗಿಯ ಕಾಲ, ಗ್ಯಾಂಗ್‌ಸ್ಟರ್ ಮುಂತಾದ ಚಲನಚಿತ್ರಗಳಲ್ಲಿ ಗಮನಾರ್ಹ ಪಾತ್ರ ನಿರ್ವಹಿಸಿದ್ದಾರೆ. ನಿರಂತರ, ಜಲಗಾರ, ಚಿತ್ತಾರದ ಬದುಕು, ಮಹಾನದಿ, ಅರುಂಧತಿ, ಶಾಂತಿ, ಪಾಪಂ, ಭೂಮಿಗೆ ಬಂದ ಭಗವಂತ, ಶ್ರೀರಸ್ತು ಶುಭಮಸ್ತು, ವೈಷ್ಣವಿ, ರಾಧಿಕಾ, ಯಾರೇ ನೀನು ಮೋಹಿನಿ ಮುಂತಾದ ಧಾರಾವಾಹಿಗಳಲ್ಲಿ ಅಭಿನಯಿಸಿದ್ದಾರೆ.

ಚಂದ್ರು ಅವರ ಸಾಧನೆಗಳನ್ನು ಗಮನಿಸಿ ಪ್ರಶಸ್ತಿಗಳು ಇವರನ್ನು ಅರಸಿ ಬಂದಿವೆ. ೨೦೧೦ರಲ್ಲಿ ರಂಗಚೇತನ ಸಂಸ್ಥೆಯ ಸಿ ಜಿ ಕೆ ಪ್ರಶಸ್ತಿ, ೨೦೧೧ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ೨೦೧೨ರಲ್ಲಿ ಪಬ್ಲಿಕ್ ರಿಲೇಶನ್ ಕೌನ್ಸಿಲ್ ಆಫ್ ಇಂಡಿಯಾ ಸಂವಹನ ಪ್ರಶಸ್ತಿ, ೨೦೧೨ರಲ್ಲಿ ಕನಕ ಪುರಸ್ಕಾರ, ೨೦೧೩ರಲ್ಲಿ ರಂಗ ಪುರಸ್ಕಾರ, ೨೦೧೬ರಲ್ಲಿ ಶ್ರೀಗಂಧ ಪುರಸ್ಕಾರ, ಕರ್ನಾಟಕ ಬೀದಿ ನಾಟಕ ಅಕಾಡೆಮಿಯ ಸಿ ಜಿ ಕೆ ಪ್ರಶಸ್ತಿ, ಶ್ರಮಿಕ ರಂಗ ಪುರಸ್ಕಾರ, ಕಾರ್ಮಿಕ ಲೋಕ ಪುರಸ್ಕಾರ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಚಂದ್ರು ಅವರ ರಂಗಪಯಣದ ಕುರಿತ ದಾಖಾಲಿತಗಳ ಸಂಗ್ರಹ, ಅವರ ನಿರ್ದೇಶನದ ನಾಟಕಗಳ ವಿಮರ್ಶೆ, ಚಂದ್ರು ಅವರ ಕುರಿತಾದ ಲೇಖನಗಳು ಹಾಗೂ ಸಂದರ್ಶನಗಳನ್ನು 'ಚಂದ್ರಯಾನ' ಎಂಬ ಕೃತಿಯನ್ನಾಗಿಸಿ ಡಾ. ಎಂ. ಭೈರೇಗೌಡ ಸಂಪಾದಿಸಿದ್ದಾರೆ. ಚಂದ್ರು ಅವರ ೬೦ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಈ ಕೃತಿ ಬಿಡುಗಡೆಗೊಂಡಿದೆ.





ರೂಪಾಂತರ ತಂಡ

ಸಂದರ್ಶನ :

ಸಂದರ್ಶನ :

೧. ರಂಗಭೂಮಿ ನಾಗರೀಕತೆಯ ಬೆಳವಣಿಗೆಗೆ ಅನಿವಾರ್ಯವೇ?

ಖಂಡಿತವಾಗಿ ಅನಿವಾರ್ಯ. ಜಗತ್ತಿನ ಎಲ್ಲ ನಾಗರೀಕತೆಗಳಿಗೂ ಅದರದ್ದೇ ಆದ ಭಿನ್ನವಾದ ಸಂಸ್ಕೃತಿ, ಜನಜೀವನ, ಕಲೆ, ಸಂಗೀತ, ನೃತ್ಯ, ಭಾಷೆ, ವೇಷಭೂಷಣಗಳ ಸುದೀರ್ಘವಾದ ಪರಂಪರೆ ಇದೆ. ಅವು ನಾಗರೀಕತೆಯ ಜೊತೆಗೆ ಬೆಳೆಯುತ್ತ ಅಥವಾ ವಿನ್ಯಾಸಗಳಿಗೊಳಗಾಗುತ್ತ ಸಾಗುತ್ತಿವೆ. ಆ ಪರಂಪರೆಯನ್ನು ದಾಖಲಿಸಲು ಹಾಗೂ ಪರಂಪರೆಯನ್ನು ತಲೆಮಾರುಗಳಿಗೆ ವರ್ಗಾಹಿಸುವವಲ್ಲಿ ರಂಗಭೂಮಿ ಪ್ರಮುಖ ಪಾತ್ರ ವಹಿಸುತ್ತದೆ. ಉದಾಹರಣೆಗೆ ಪ್ರಾಚೀನವಾದ ಹರಪ್ಪ, ಮೆಹೆಂಜೋದಾರ್ ನಾಗರೀಕತೆಗಳಿಂದ ಹಿಡಿದು ಹಲವಾರು ನಾಗರೀಕತೆಗಳನ್ನು ಮನುಷ್ಯ ದಾಟಿ ಬಂದಿದ್ದಾನೆ. ಅಲ್ಲಿ ಸಿಕ್ಕಿರುವ ಶಾಸನ, ಕೆತ್ತನೆ, ಶಿಲ್ಪಕಲೆಗಳು ಐತಿಹಾಸಿಕವಾಗಿ ಸಂಶೋಧಿಸಲ್ಪಟ್ಟಿವೆ. ಇವೆಲ್ಲವನ್ನೂ ಸಾಮಾನ್ಯ ಮನುಷ್ಯನಿಗೆ ತಲುಪಿಸುವ ಕ್ರಮವೇನು ಎಂದು ಅಲೋಚಿಸಬೇಕಾಗುತ್ತದೆ. ಓದನ್ನು ವಿರಳ ಹವ್ಯಾಸವಾಗಿಸುತ್ತಿರುವ ಇಂದಿನ ಯುವಜನತೆಯನ್ನು ಮನೋರಂಜನೆಯ ಮಾಧ್ಯಮದ ಮುಖಾಂತರವೇ ತಲುಪಬೇಕಾದ ಸ್ಥಿತಿ ನಿರ್ಮಾಣವಾಗುತ್ತಿದೆ. ಒಂದು ಕಾಲಘಟ್ಟದ ಪುನರ್ ನಿರ್ಮಿತಿಯನ್ನು ದೂರದರ್ಶನಗಳ ವಿವಿಧ ಕಾರ್ಯಕ್ರಮಗಳು, ಧಾರಾವಾಹಿಗಳು, ಚಲನಚಿತ್ರಗಳು ತರಲು ಸಾಧ್ಯವಿದ್ದರೂ ಅವೆಲ್ಲಕ್ಕಿಂತ ಕಡಿಮೆ ಸಮಯ ಹಾಗೂ ವೆಚ್ಚದಲ್ಲಿ ಸೃಷ್ಟಿಸಲು ಮತ್ತು ಶೀಘ್ರವಾಗಿ ತಲುಪಿಸಲು ರಂಗಭೂಮಿಯಿಂದ ಮಾತ್ರ ಸಾಧ್ಯ.

೨. ಮಾನವ ನಾಗರೀಕತೆಯ ಬೆಳವಣಿಗೆಗೆ ರಂಗಭೂಮಿಯ ಕೊಡುಗೆಯನ್ನು ವಿವರಿಸಿ?

'ರಂಗಭೂಮಿ ನಮ್ಮನ್ನು ನಾವು ನೋಡುವ ಕಲಾ ಪ್ರಕಾರ' ಎಂದು ಪಾಶ್ಚಾತ್ಯ ಚಿಂತಕ ಆಗಸ್ಟೋ ಬೋಲ್ ಹೇಳುತ್ತಾನೆ. ಅದು ನಿಜವೂ ಹೌದು. ರಂಗಭೂಮಿ ಮನುಷ್ಯ ಸಮಾಜದ ಸೂಕ್ಷ್ಮಾತಿಸೂಕ್ಷ್ಮಗಳನ್ನು, ಮಾನವ ಸಂಬಂಧಗಳ ಒಳಿತು–ಕೆಡಕುಗಳನ್ನು , ಒಳಗು–ಹೊರಗುಗಳನ್ನು ಪ್ರತಿನಿಧಿಸುತ್ತದೆ.ವಿಭಿನ್ನ ಸಂಸ್ಕೃತಿ, ಹಿನ್ನೆಲೆ, ನಂಬಿಕೆ, ದೃಷ್ಟಿಕೋನಗಳಿಗೆ ಜೀವ ನೀಡುತ್ತದೆ. ರಂಗಭೂಮಿ ಪ್ರಾಚೀನ ನಾಗರೀಕತೆಯ ಭಿನ್ನ ಸಂಸ್ಕೃತಿಯ ಪರಿಚಯ ನೀಡುತ್ತಲೇ ಬದಲಾವಣೆಯ ಹಂತಗಳನ್ನು ಬೆಳಕಿಗೆ ತರುತ್ತದೆ. ಅಂದಿನಿಂದ –ಇಂದಿನವರೆಗಿನ ಸಮಾಜದ ಚಿತ್ರಣವನ್ನು ತೌಲನಿಕವಾಗಿ ಗಮನಿಸಲು ಸಾಧ್ಯವಿದೆ. ಅಂದಿನ ಕಾಲಘಟ್ಟವನ್ನು ಪುನರ್ ಸೃಷ್ಟಿಸಿ ಒಂದು ಪರಂಪರೆಯನ್ನು ತಲೆಮಾರಿನಿಂದ ತಲೆಮಾರಿಗೆ ತಲುಪಿಸಲು ಸಹಕಾರಿಯಾಗಿದೆ. ಉದಾಹರಣೆಗೆ ಖುಶ್ವತ್ ಸಿಂಗ್ ಅವರ 'ಟ್ರೈನ್ ಟು ಪಾಕಿಸ್ತಾನ' ಕೃತಿ. ಈ ಕೃತಿಯು ಸ್ವಾತಂತ್ರ್ಯಾನಂತರದ ಕೋಮುಗಲಭೆ, ಭಾರತದಿಂದ ಪಾಕಿಸ್ತಾನಕ್ಕೆ ಹೋಗುವಾಗ ಮತ್ತು ಪಾಕಿಸ್ತಾನದಿಂದ ಭಾರತಕ್ಕೆ ಬರುವಾಗ ನಡೆಯುವ ಹಿಂಸೆಯನ್ನು ಅನಾವರಣಗೊಳಿಸುತ್ತದೆ. ಈ ಮುಖಾಂತರ ಕೋಮುಗಲಭೆಯ ದುಷ್ಪರಿಣಾಮ, ದುರಂತ, ಮನುಷ್ಯ ತನ್ನ ಹಿಂಸಾಪ್ರವೃತ್ತಿಯಿಂದ ಹೊರಬರಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತದೆ. ಮಾನವ ಸಾಗಬೇಕಾದ ಶಾಂತಿ ಮತ್ತು ಸಾಮರಸ್ಯದ ಬದುಕಿನೆಡೆಗೆ ಸೆಳೆಯುತ್ತದೆ. ಮಾನವೀಯತೆ ಮರೆಯಾದರೆ ನಮ್ಮ ಬದುಕು ದುರಂತವಾಗುವುದನ್ನು ತೋರಿಸುತ್ತಲೇ ಎಚ್ಚರಿಸುವ ಪ್ರಯತ್ನ ನಡೆಸುತ್ತದೆ.



೩. ವಿದ್ಯಾರ್ಥಿಗಳಿಗೆ ರಂಗಭೂಮಿಯಿಂದ ಆಗುವ ಉಪಯೋಗಗಳನ್ನು ತಿಳಿಸಿ.

ವಿದ್ಯಾರ್ಥಿಗಳು ಮನೆ, ಕಾಲೇಜು, ಸ್ನೇಹಿತರು ಎಂಬ ಸೀಮಿತ ವಲಯದಲ್ಲಿ ಬದುಕುತ್ತಿರುತ್ತಾರೆ. ರಂಗಭೂಮಿ ಅವರಲ್ಲಿರುವ ಸಂಕೋಚವನ್ನು ದೂರಸರಿಸಿ, ಎಲ್ಲರೊಂದಿಗೆ ಬೆರೆಯಲು ಅನುವು ಮಾಡಿಕೊಡುತ್ತದೆ. ಬಹುತೇಕ ನಾಟಕಗಳು ಕನಿಷ್ಟವೆಂದರೂ ೩೦ರಿಂದ ೪೦ ಜನರ ತಂಡವಾಗಿ ರೂಪುಗೊಂಡಿರುತ್ತವೆ. ಇಲ್ಲಿ ಹಲವಾರು ಚರ್ಚೆ, ವಿಚಾರಗಳ ವಿನಿಮಯ, ಕಲಾವಿದರ ಅಭಿವ್ಯಕ್ತಿಗೆ ವೇದಿಕೆಯ ಅವಕಾಶವಿರುತ್ತದೆ. ನಾಟಕದ ತರಬೇತಿ ಮತ್ತು ತಾಲೀಮು ಎಲ್ಲ ಪಾತ್ರಧಾರಿಗಳನ್ನೂ ಜೊತೆಯಲ್ಲಿ ಸೇರಿಸುತ್ತದೆ. ಕಲಾವಿದರು ತಮ್ಮ ಪಾತ್ರದ ಅಭಿನಯ, ಸಂಭಾಷಣೆ ಮಾತ್ರವಲ್ಲದೆ ಪ್ರತಿ ಪಾತ್ರದ ಅಭಿನಯ, ಸಂಭಾಷಣೆಯನ್ನು ಅರಿತುಕೊಂಡು ಗಮನಿಸಬೇಕಾಗುತ್ತದೆ. ಪ್ರತಿ ಪಾತ್ರವೂ ರಂಗದ ಮೇಲೆ ಬರುವ –ಹೋಗುವ ರೀತಿ, ಸಮಯ ಹೊಂದಾಣಿಕೆ, ಪ್ರತಿಕ್ರಿಯೆ ಎಲ್ಲವೂ ನಾಟಕ ತಂಡದ ಪ್ರತಿಯೊಬ್ಬರ ಗಮನದಲ್ಲಿ ಇರುವಂತೆ ತರಬೇತಿ ನೀಡಲಾಗುತ್ತದೆ. ಇದು ಗ್ರಹಿಕಾಶಕ್ತಿ ಮತ್ತು ನೆನಪಿನ ಶಕ್ತಿಯ ವೃದ್ಧಿಗೆ ಕಾರಣವಾಗುತ್ತದೆ. ಸಮಯದ ಪರಿಪಾಲನೆ ಮತ್ತು ಹೊಂದಾಣಿಕೆಯ ಮನೋಭಾವ ಅವನಿಗೆ ಅರಿವಿಲ್ಲದಂತೆಯೇ ಅವನೊಳಗೆ ಸೇರಿಕೊಳ್ಳುತ್ತದೆ. ಪಾತ್ರಗಳ ಬಗ್ಗೆ ಪೂರ್ವತಯಾರಿ ಮಾಡಿಕೊಳ್ಳಲು ಆ ಸನ್ನಿವೇಶಗಳ ಬಗ್ಗೆ ಹೆಚ್ಚಿನ ಮಾಹಿತಿಗೆ ವಿದ್ಯಾರ್ಥಿ ಓದುವ ಹವ್ಯಾಸ ರೂಢಿಸಿಕೊಳ್ಳಬೇಕಾಗುತ್ತದೆ. ಧ್ವನಿ ಏರಿಳಿತ, ಸಂಜ್ಞೆಗಳು, ಆಂಗಿಕ ಚಲನೆಗಳನ್ನು ಗ್ರಹಿಸುವ ಮೂಲಕ, ಸಮಯಕ್ಕೆ ತಕ್ಕಂತೆ ಪ್ರತಿಕ್ರಿಯಿಸುವ ಮೂಲಕ ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುತ್ತಾರೆ.

೪. ಹೊಸಬರಿಗೆ ರಂಗಪ್ರವೇಶಕ್ಕೆ ಅಗತ್ಯವಾಗಿ ಇರಬೇಕಾದ ಪೂರ್ವತಯಾರಿಗಳೇನು?

ರಂಗಪ್ರವೇಶಕ್ಕೆ ಅಗತ್ಯವಾಗಿ ಆಸಕ್ತಿ ಮತ್ತು ಬದ್ಧತೆ ಕಡ್ಡಾಯವಾಗಿ ಇರಬೇಕು. ಹಲವಾರು ವ್ಯಕ್ತಿಗಳನ್ನು ಒಳಗೊಂಡ ತಂಡದಲ್ಲಿ ಒಬ್ಬರ ಸಮಯ ಏರುಪೇರಾದರೂ ಪ್ರತಿಯೊಬ್ಬರ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ಸಮಯ ಪರಿಪಾಲನೆಯ ಬದ್ಧತೆ ಇಲ್ಲಿ ಅತ್ಯಗತ್ಯ. ನಟನೆಯಲ್ಲಿ ಆಸಕ್ತಿ ಇದ್ದಾಗ ಮಾತ್ರ ಅದು ಪ್ರತಿ ಹಂತದಲ್ಲೂ ವಿಕಾಸಗೊಳ್ಳಲು ಸಾಧ್ಯ. ನಾಟಕದ ಕಥಾವಸ್ತುವಿಗೆ ಸಂಬಂಧಿಸಿದಂತೆ ಮಾಹಿತಿ ಕಲೆ ಹಾಕುವ, ತಜ್ಞರಿಂದ ಸಿಕ್ಕ ತರಬೇತಿಯನ್ನು ಮನೆಯಲ್ಲಿ ಮತ್ತಷ್ಟು ಅಭ್ಯಾಸ ಮಾಡುವ, ಸಂಭಾಷಣೆಯಲ್ಲಿ ಧ್ವನಿ ಏರಿಳಿತ ಮತ್ತು ಆಂಗಿಕ ಚಲನೆಗಳನ್ನು ಮತ್ತಷ್ಟು ಸುಧಾರಿಸಿಕೊಳ್ಳುವ ಪ್ರಯತ್ನ ನಿರಂತರವಾಗಿರಬೇಕು.

೫. ಸಾಂಪ್ರದಾಯಿಕ ರಂಗಭೂಮಿಗಿಂತ ಆಧುನಿಕ ರಂಗವು (ಭಾರತ ಮತ್ತು ಪಾಶ್ಚಾತ್ಯ ರಂಗಭೂಮಿಗೆ ಸಂಬಂಧಿಸಿದಂತೆ) ಹೇಗೆ ಭಿನ್ನವಾಗಿದೆ?

ಸಾಂಪ್ರದಾಯಿಕ ರಂಗಭೂಮಿಯಲ್ಲಿ ಹಲವು ಮಿತಿಗಳಿದ್ದವು. ರಂಗಭೂಮಿಯ ಕಲಾವಿದ ಮೈಕ್ ಮುಂದೆ ಅಭಿನಯಿಸುತ್ತಿದ್ದ. ಇಲ್ಲವೆ ತನ್ನ ಧ್ವನಿಯ ಮೇಲೆ ಅವಲಂಬಿತನಾಗಿರುತ್ತಿದ್ದ. ಮೈಕ್‌ನಿಂದ ಸ್ವಲ್ಪ ದೂರಸರಿದರೂ ಧ್ವನಿ ಅಸ್ಪಷ್ಟವಾಗುತ್ತಿತ್ತು. ಮಾಸ್ಟರ್ ಹಿರಣ್ಣಯ್ಯ ಅವರ ನಾಟಕಗಳಲ್ಲೆಲ್ಲ ವಾಚಿಕ ಅಭಿನಯವೇ ಸಂಪೂರ್ಣವಾಗಿ ಕಂಡುಬರುತ್ತಿತ್ತು. ಈಗ ಮೈಕ್ರೋಫೋನ್‌ಗಳನ್ನು ಬಳಸಲು ಅವಕಾಶ ಇರುವುದರಿಂದ ವೇದಿಕೆಯ ಯಾವ ಭಾಗದಲ್ಲಿದ್ದರೂ ಕಲಾವಿದ ಧ್ವನಿ ಸ್ಪಷ್ಟವಾಗಿ ಪ್ರೇಕ್ಷಕನನ್ನು ತಲುಪುತ್ತದೆ. ಸಂಭಾಷಣೆ ದೀರ್ಘಸ್ವರೂಪದಲ್ಲಿದ್ದಾಗ ಪಾತ್ರಧಾರಿ ಆಯಾಸಗೊಳ್ಳುವ ಸಾಧ್ಯತೆಯನ್ನು ಇಂದಿನ ಧ್ವನಿಮುದ್ರಕಗಳು ಕಡಿತಗೊಳಿಸಿವೆ.

ನಾಟಕದ ಭಿತ್ತಿಪತ್ರಗಳನ್ನು, ಬ್ಯಾನರ್‌ಗಳನ್ನು ಮಾಡುವಾಗ ಚಿತ್ರಕಲಾವಿದನ ಮೇಲೆ ಅವಲಂಬನೆ ಇರುತ್ತಿತ್ತು. ಬಟ್ಟೆಯ ಮೇಲೆ ಬಣ್ಣಗಳನ್ನು ತುಂಬುವ ಮೂಲಕ ಭಿತ್ತಿಪತ್ರಗಳು ಸಿದ್ಧಗೊಳ್ಳುತ್ತಿದ್ದವು. ಚಿತ್ರಬಿಡಿಸಲು, ಬಣ್ಣ ಒಣಗಲು ಸಮಯ ಬೇಕಿತ್ತು. ಅಂಚೆ ಪತ್ರದಲ್ಲಿ ಬರೆದು ಎಲ್ಲರಿಗೂ ಆಹ್ವಾನ ಕಳಿಸಲಾಗುತ್ತಿತ್ತು. ಹಲವಾರು ದಿಗಳಲ್ಲಿ ನಡೆಯುತ್ತಿದ್ದ ಇಂತಹ ಕೆಲಸಗಳೆಲ್ಲ ಈಗ ಕ್ಷಣ ಮಾತ್ರದಲ್ಲಿ ನಡೆಯುತ್ತವೆ. ಹಲವಾರು ಮೊಬೈಲ್ ಆಪ್‌ಗಳು ಈಗ ಲಭ್ಯವಿದ್ದು ಯಾರೂ ಬೇಕಾದರೂ ಇವುಗಳ ಸಹಾಯದಿಂದ ಆಹ್ವಾನ ಪತ್ರಿಕೆ ತಯಾರಿಸಬಹುದು. ಸಾಮಾಜಿಕ ಜಾಲತಾಣಗಳಿಗೆ ಕಳಿಸುವ ಮೂಲಕ ಸಾವಿರಾರು ಜನರನ್ನು ಒಮ್ಮೆಲೆ ತಲುಪಲು ಸಾಧ್ಯವಿದೆ. ಪ್ರಸಾಧನನ ಮೂಲಕ ೧೬ ವರ್ಷದ ಹುಡುಗನನ್ನು ೮೦ ವರ್ಷದ ವೃದ್ಧನನ್ನಾಗಿಸಬಹುದದಷ್ಟು ಅವಕಾಶ ಲಭ್ಯವಿದೆ. ಆಧುನಿಕ ಪ್ರಸಾಧನ ಸುರೂಪಿಯನ್ನು ಕುರೂಪಿಯನ್ನಾಗಿಸಿ, ಕುರೂಪಿಯನ್ನು ಸುರೂಪಿಯನ್ನಾಗಿಸಬಲ್ಲದು. ಬೆಳಕಿನ ವಿನ್ಯಾಸ, ರಂಗ ಪರಿಕರಗಳು, ವಸ್ತ್ರವಿನ್ಯಾಸ, ಸಂಗೀತ, ನೃತ್ಯ ಹೀಗೆ ರಂಗಭೂಮಿಯ ಎಲ್ಲ ಸಾಧ್ಯತೆಗಳಲ್ಲಿಯೂ ಆಧುನಿಕ ತಂತ್ರಜ್ಞಾನ ನವೀನಗೊಳಿಸಿದೆ.

೬. ರಂಗಭೂಮಿಯ ವಿವಿಧ ತಾಂತ್ರಿಕ ಆಯಾಮಗಳ ಬಗ್ಗೆ ತಿಳಿಸಿ.

ಅಭೂತಪೂರ್ವವಾಗಿ ಬೆಳವಣಿಗೆ ಹೊಂದುತ್ತಿರುವ ತಂತ್ರಜ್ಞಾನ ರಂಗಭೂಮಿಯ ಸಾಧ್ಯತೆಗಳನ್ನು ಹೆಚ್ಚಿಸಿದೆ. ಒಂದೆಡೆಯೆ

ನಿಂತು ಸಂಭಾಷಣೆ ಪೂರ್ಣಗೊಳಿಸಬೇಕಾದ ಅನಿವಾರ್ಯತೆ ಇಂದು ಇಲ್ಲ. ಪಾತ್ರಧಾರಿಯ ಚಲನೆಗೆ ಅನುಗುಣವಾಗಿ ಮೈಕ್‌ಗಳನ್ನು ವೇದಿಕೆಯಲ್ಲಿ ಅಳವಡಿಸಲು ಸಾಧ್ಯವಿದೆ.

ಪೂರ್ಣಚಂದ್ರ ತೇಜಸ್ವಿಯವರ ಕರ್ವಾಲೋ ಕಾದಂಬರಿಯನ್ನು ನಾಟಕಕ್ಕೆ ಅಳವಡಿಸಿದಾಗ ಹಾರುವ ಓತಿ (ಫ್ಲೈಯಿಂಗ್ ಲಿಸಾರ್ಡ್)ಯನ್ನು ರಂಗದ ಮೇಲೆ ತೋರಿಸಬೇಕು. ಕೊನೆಯವರೆಗೂ ಪ್ರೇಕ್ಷಕನಲ್ಲಿ ಕುತೂಹಲ ಹುಟ್ಟಿಸಬೇಕೆಂದು ಯೋಚಿಸುತ್ತಿದ್ದೆ. ಆಗ ಓದಿದ **'ಥೌಸಂಡ್ ವಂಡರ್ಸ್ ಆಫ್ ನೇಚರ್'** ಎಂಬ ಪುಸ್ತಕ ಹೊಸ ಆಲೋಚನೆಯನ್ನು ಹುಟ್ಟಿಸಿತು. ಆ ಪುಸ್ತಕದಲ್ಲಿ ಒಂದು ವಂಡರ್ ರೂಪದಲ್ಲಿ ಫ್ಲೈಯಿಂಗ್ ಲಿಸಾರ್ಡ್ ಚಿತ್ರ ಸಿಕ್ಕಿತು. ಅದನ್ನು ಬಳಸಿಕೊಂಡು ಗ್ರಾಫಿಕ್ ಡಿಸೈನ್ ಮಾಡಿಸಿ, ನೈಜವೆಂಬಂತೆ ಸ್ಕ್ರೀನ್‌ನ ಮೇಲೆ ಅದರ ಚಲನೆಯನ್ನು ತೋರಿಸಲಾಯಿತು. ಈ ಸಾಧ್ಯತೆ ಪ್ರೇಕ್ಷಕನನ್ನು ಬೆರಗುಗೊಳಿಸಿ, ಮೆಚ್ಚುಗೆ ನೀಡಿತು. ಧ್ವನಿಮುದ್ರಕ ಕೇಳಿಸಲು, ಚಿಕ್ಕ ವೀಡಿಯೊ ತೋರಿಸಲು ಇಂದಿನ ತಂತ್ರಜ್ಞಾನದಲ್ಲಿ ಅವಕಾಶವಿದೆ. ಜೋರಾದ ಗಾಳಿಯ ಶಬ್ದ, ನೀರಿನ ಅಲೆಯ ಶಬ್ದ ಕೇಳಿಸಲು ಸಾಧ್ಯವಿದೆ. ದುಬಾರಿ ವೆಚ್ಚ ತೆರಲು ಸಿದ್ಧವಾಗುವ ನಿರ್ಮಾಣದಲ್ಲಿ ಸಮುದ್ರ ತೀರದಂತೆ, ಮೀನು ತೇಲುತ್ತಿರುವಂತೆ, ನೀರಿನ ಅಲೆ ಜೋರಾಗಿ ಅಪ್ಪಳಿಸುವಂತೆ ಈ ರೀತಿ ಹಲವು ಎಫೆಕ್ಟ್‌ಗಳನ್ನು ರಂಗದ ಮೇಲೆ ತರಲು ಸಾಧ್ಯವಿದೆ. ಆಧುನಿಕ ತಂತ್ರಜ್ಞಾನ ಹಲವು ಆಯಾಮಗಳನ್ನು ತೆರೆದಿದ್ದು, ಅದನ್ನು ಬಳಸಿಕೊಳ್ಳುವುದು ನಿರ್ದೇಶಕನ ಕ್ರಿಯಾಶೀಲತೆಗೆ ಸಂಬಂಧಿಸಿದ ವಿಷಯವಾಗಿದೆ.

ರಾಮಧಾನ್ಯ ಚರಿತೆಯನ್ನು ನಾಟಕವಾಗಿಸಿದಾಗ **'**ಎಲ್ಲಿ ನೋಡಿದರಲ್ಲಿ ರಾಮ**'** ಎಂದು ದೈವವನ್ನು ಆರಾಧಿಸುವ ಕೀರ್ತನೆಯಿದೆ. ಚಲನಚಿತ್ರಗಳಲ್ಲಿ ಗ್ರಾಫಿಕ್ಸ್ ಮುಖಾಂತರ ರಾಮನನ್ನು ಹಲವು ಕಡೆ ತರುವುದು ಇಲ್ಲವೇ ಮರೆಯಾಗಿಸುವುದು ಸಾಧ್ಯ. ಆದರೆ ರಂಗದಲ್ಲಿ ಪ್ರೇಕ್ಷಕನಿಗೆ ರಾಮನನ್ನು ಹಲವೆಡೆ ತೋರಿಸುವ ಸನ್ನಿವೇಶ ಹೇಗೆ? ಎಂಬುದು ಸಮಸ್ಯೆಯಾಗಿತ್ತು. ರಾಮನ ಪಾತ್ರಧಾರಿಗೆ ಸ್ಕೇಟಿಂಗ್ ಬರುತ್ತಿತ್ತು. ಆತ ಸ್ಕೇಟಿಂಗ್ ಮುಖಾಂತರ ಪ್ರವೇಶ ಪಡೆದು ಮಿಂಚಿನ ಬೆಳಕಂತೆ ಈಡೀ ಸಭೆಯನ್ನು ಆವರಿಸಿ, ಮತ್ತೆ ನಿರ್ಗಮಿಸಿದ. ಕ್ಷಣ ಮಾತ್ರದಲ್ಲಿ ನಡೆದ ಘಟನೆಗೆ ಪ್ರೇಕ್ಷಕ ಮಂತ್ರಮುಗ್ಧನಾದ. ಇಂತಹ ಹಲವಾರು ಸಾಧ್ಯತೆಗಳನ್ನು ಆಧುನಿಕ ರಂಗಭೂಮಿಯಲ್ಲಿ ಪ್ರದರ್ಶಿಸಲಾಗುತ್ತಿದೆ.

೭. ರಂಗಭೂಮಿಯಲ್ಲಿ ವಸ್ತ್ರವಿನ್ಯಾಸದ ಮಹತ್ವವನ್ನು ತಿಳಿಸಿ.

ನಾಟಕದಲ್ಲಿ ವಸ್ತ್ರವಿನ್ಯಾಸ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಗ್ರೀಕ್ ಕಾಲದ ನಾಟಕಕ್ಕೆ ಆಧುನಿಕ ಉಡುಗೆ ತೊಡಿಸಲು ಸಾಧ್ಯವಿಲ್ಲ. ಗ್ರೀಕ್, ರೋಮ್, ಐತಿಹಾಸಿಕ, ಪೌರಾಣಿಕ, ಸ್ವಾತಂತ್ರ್ಯಪೂರ್ವ ಹೀಗೆ ಯಾವುದೇ ಕಥಾವಸ್ತು ಹೊಂದಿದ್ದರೆ ಆ ಕಾಲದ ಜನಜೀವನದ ಬಗ್ಗೆ ಮಾಹಿತಿ ಸಂಗ್ರಹಿಸಬೇಕು. ಅಂದಿನ ಕಾಲದ ವೇಷಭೂಷಣ, ಒಡವೆ, ಟೋಪಿ, ಪಾದರಕ್ಷೆ ಹೀಗೆ ಪ್ರತಿಯೊಂದನ್ನೂ ಗಮನಿಸಿ ಆ ಕಾಲಘಟ್ಟವನ್ನು ಮರುಸೃಷ್ಟಿಸಬೇಕು. ಆ ಮೂಲಕ ನೈಜತೆಯನ್ನು ಪ್ರತಿನಿಧಿಸಬೇಕು. ಉದಾಹರಣೆಗೆ ೧೯೮೩ರಲ್ಲಿ ಗಾಂಧಿ ಚಲನಚಿತ್ರಕ್ಕೆ ವಸ್ತ್ರವಿನ್ಯಾಸಕರಾದ ಭಾನು ಅಥೈಯಾ ಅವರು ಅತ್ಯುತ್ತಮ ವಸ್ತ್ರವಿನ್ಯಾಸ ವಿಭಾಗದಲ್ಲಿ ಆಸ್ಕರ್ ಪ್ರಶಸ್ತಿಗೆ ಭಾಜನರಾದರು. ರಾಮಧಾನ್ಯ ಚರಿತೆ, ಯಹೂದಿ ಹುಡುಗಿ, ಮಳೆ ಬೀಜ, ಈಡಿಪಸ್, ಕಾಲಜ್ಞಾನಿ ಕನಕ ಇವೆಲ್ಲವೂ ವಸ್ತ್ರವಿನ್ಯಾಸಕ್ಕೆ ಬಹಳ ಒತ್ತು ಕೊಟ್ಟ ನಾಟಕಗಳು. ನಾನೇ ಖುದ್ದಾಗಿ ಬಟ್ಟೆ ಆರಿಸಿ, ಅಂದಿನ ವಸ್ತ್ರವಿನ್ಯಾಸಕ್ಕೆ ಅನುಗುಣವಾಗಿ ಬಟ್ಟೆ ಹೊಲಿಸಿದ ನಾಟಕಗಳು. ನಾಟಕ ರಂಗೋತ್ಸವಗಳಲ್ಲಿ ವಸ್ತ್ರವಿನ್ಯಾಸಕ್ಕೆ ಅತ್ಯಂತ ಪ್ರಶಂಸೆಗೆ ಪಾತ್ರವಾದವುಗಳು.



೮. ಅಮೂರ್ತತೆಯ ಸಂಕೀರ್ಣತೆಗಳನ್ನು ರಂಗದಲ್ಲಿ ತರುವುದರ ಕಷ್ಟಗಳನ್ನು ವಿವರಿಸಿ.

ಅಮೂರ್ತ ಸಂಗತಿಗಳನ್ನು ರಂಗದ ಮೇಲೆ ತರುವುದು ಕಷ್ಟ ಎನ್ನುವುದಕ್ಕಿಂತ ಅದು ನಿರ್ದೇಶಕನ ಕ್ರಿಯಾಶೀಲತೆಗೆ ಸಂಬಂಧಿಸಿದ್ದು ಎಂಬುದು ನನ್ನ ಅಭಿಪ್ರಾಯ. ಕಣ್ಣಿಗೆ ಕಾಣದ, ಕೈಗೆ ಸಿಗದ ಎಷ್ಟೋ ಅಮೂರ್ತ ಸಂಗತಿಗಳನ್ನು ರಂಗಭೂಮಿಯಲ್ಲಿ ಮಾತಿನ ಮೂಲಕ, ಆಂಗಿಕ ಸಂಜ್ಞೆಗಳ ಮೂಲಕ ಹಾಗೂ ನೃತ್ಯದ ಮೂಲಕ ಅಭಿವ್ಯಕ್ತಿಪಡಿಸಲಾಗುತ್ತದೆ. ಡಾ.ಕೆ. ವೈ. ನಾರಾಯಣ ಸ್ವಾಮಿಯವರ ಚಕ್ರರತ್ನ ನಾಟಕವನ್ನು ರಂಗದ ಮೇಲೆ ತಂದ ಸನ್ನಿವೇಶವನ್ನು ಉದಾಹರಿಸಬಹುದು. ಅದು ಭರತ – ಬಾಹುಬಲಿಯರ ಯುದ್ಧಕ್ಕೆ ಸಂಬಂಧಿಸಿದ ಕಥಾವಸ್ತುವನ್ನು ಒಳಗೊಂಡಿದೆ. ಚಕ್ರರತ್ನವೆಂಬ ಆಯುಧ ಮನುಷ್ಯನಲ್ಲಿ ಯುದ್ಧದ ಹಂಬಲವನ್ನು ಪ್ರೇರೇಪಿಸುತ್ತದೆ. ಕೈಯಲ್ಲಿ ಚಕ್ರ ಹಿಡಿದಂತೆ ತಂದರೆ ಅದರ ಚಲನೆಯನ್ನು ಪರಿಣಾಮಕಾರಿಯಾಗಿ ತೋರಿಸಲಾಗುವುದಿಲ್ಲ. ಚಕ್ರ ಮೂರ್ತವಾದರೂ, ಅದು ಉದ್ದೀಪಗೊಳಿಸುವ ಹಂಬಲಗಳು ಅಮೂರ್ತವಾದುದು. ಅಟ್ಟಕಲರಿ ಎಂಬ ಕೇರಳದ ನೃತ್ಯ ಪ್ರಕಾರದಲ್ಲಿ ನುರಿತ ನೃತ್ಯಗಾತಿಯ ಹಾವಭಾವಗಳ ಆಂಗಿಕ ಚಲನೆ ಮೂಲಕ ಅಮೂರ್ತತೆಯನ್ನು ಪ್ರತಿಬಿಂಬಿಸಲಾಯಿತು. ಚಲನಚಿತ್ರಗಳಲ್ಲಿ ಗ್ರಾಫಿಕ್ಸ್ ಮುಖಾಂತರ ತೋರಿಸಬಹುದಾದ ಎಷ್ಟೋ ಅಂಶಗಳನ್ನು ಇಲ್ಲಿ ಮಾತಿನ ಮುಖಾಂತರವೇ ಅಮೂರ್ತತೆಯನ್ನು ಮೂರ್ತಗೊಳಿಸುವ ಭ್ರಮೆಯನ್ನು ಸೃಷ್ಟಿಸಲಾಗುತ್ತದೆ.

೯. ಕತೆ, ಕಾದಂಬರಿಗಳನ್ನು ರಂಗಕ್ಕೆ ಅಳವಡಿಸುವಾಗ ಇರಬೇಕಾದ ಎಚ್ಚರ ತಿಳಿಸಿ.

ಯಾವ ಕತೆ, ಕಾದಂಬರಿ, ಕಾವ್ಯಗಳಲ್ಲಿ ನಾಟಕೀಯ ಅಂಶ ಅಧಿಕ ಪ್ರಮಾಣದಲ್ಲಿ ಕಂಡುಬರುತ್ತದೆಯೋ ಅವನ್ನು ಮಾತ್ರ ನಾಟಕ ರೂಪಕ್ಕೆ ತರಲು ಸಾಧ್ಯ. ಅವುಗಳ ಮೂಲಭೂತ ಆಶಯಗಳಿಗೆ ಧಕ್ಕೆ ಬರದಂತೆ ಎಚ್ಚರವಹಿಸಿ ರಂಗಕ್ಕೆ ಅಳವಡಿಸಬೇಕು. ಕತೆ, ಕಾವ್ಯ, ಕಾದಂಬರಿಗಳು ಹಕ್ಕುಸ್ವಾಮ್ಯದ ಅಡಿಯಲ್ಲಿದ್ದರೆ, ಅದಕ್ಕೆ ಕಾನೂನುಬದ್ಧವಾಗಿ ಅನುಮತಿಯನ್ನು ಪಡೆಯಬೇಕು. ಉದಾಹರಣೆಗೆ ಪರಸಂಗದ ಗೆಂಡೆತಿಮ್ಮ ಕಾದಂಬರಿಯನ್ನು ನಾಟಕಕ್ಕೆ ತಂದಾಗ, ನಿಧಾನವಾಗಿ ಆಧುನಿಕತೆ ಮನುಷ್ಯನ ಬದುಕಿನಲ್ಲಿ ಸೇರುವ ಅಂಶವನ್ನು ಚಿತ್ರಿಸಬೇಕು. ಅಂದಿನ ಕಾಲಘಟ್ಟದ ಚಿತ್ರಣವನ್ನು ಪುನರ್ ರಚಿಸಬೇಕೇ ವಿನಃ ಇಂದಿನ ಆಧುನಿಕ ಬದುಕನ್ನಲ್ಲ.



೧೦. ನಾಟಕವೊಂದರ ತಯಾರಿಕೆಯ ಹಂತಗಳನ್ನು ವಿವರಿಸಿ.

ಸ್ಕ್ರಿಪ್ಟ್ ಬಗ್ಗೆ ಯೋಚಿಸಬೇಕು. ಯಾವ ರೀತಿಯ ಕಥಾವಸ್ತುವನ್ನು ಆಯ್ಕೆ ಮಾಡಿದ್ದೇವೆ ಎಂಬುದು ಅತ್ಯಂತ ಮೂಲಭೂತ ಸಂಗತಿ. ಅದು ಐತಿಹಾಸಿಕ, ಪೌರಾಣಿಕ, ಆಧುನಿಕ ಹೀಗೆ ಕಥಾವಸ್ತುವಿನ ಆಧಾರದಲ್ಲಿ ಕಾಲಘಟ್ಟ ನಿರ್ಣಯಗೊಳ್ಳುತ್ತದೆ. ಕಥಾವಸ್ತುವಿಗೆ ಪೂರಕವೆನಿಸಿದ ಮಾಹಿತಿಗಳ ಬಗ್ಗೆ ಕಲೆ ಹಾಕಿ ಕೂಲಂಕುಷ ಪರಿಶೀಲನೆ ನಡೆಸಬೇಕು. ಪಾತ್ರಗಳನ್ನು ವಿಂಗಡಿಸಿ, ಸೂಕ್ತ ಕಲಾವಿದರನ್ನು ಆಯ್ಕೆ ಮಾಡಬೇಕು. ಉದಾಹರಣೆಗೆ ಹರಿಶ್ಚಂದ್ರ, ದುಶ್ಯಂತ ಇಂತಹ ಪೌರಾಣಿಕ ಪಾತ್ರಗಳು ಕಾಲ್ಪನಿಕ. ಆ ಪಾತ್ರಗಳಲ್ಲಿ ಅಲ್ಪ–ಸ್ವಲ್ಪ ಬದಲಾವಣೆ ತೋರಿಸಬಹುದು.ಆದರೆ ಗಾಂಧಿ, ನೆಹರೂ ಮುಂತಾದ ವಾಸ್ತವಿಕ ಪಾತ್ರಗಳನ್ನು ಮಾಡುವಾಗ ಅವರನ್ನು ಹೋಲಬಹುದಾದ ಪಾತ್ರಧಾರಿಯ ಆಯ್ಕೆ ಅತ್ಯಂತ ಪ್ರಮುಖವಾದುದು. ಪಾತ್ರಧಾರಿಗಳಿಗೆ ಧ್ವನಿ ಏರಿಳಿತಗಳ ಅಭ್ಯಾಸ ಹಾಗೂ ಆಂಗಿಕ ಚಲನೆಯ ವ್ಯಾಯಾಮಗಳನ್ನು ನಿಯಮಿತವಾಗಿ ತಾಲೀಮಿನಲ್ಲಿ ಮಾಡಿಸಬೇಕು. ಶಿಸ್ತುಬದ್ಧವಾಗಿ ಸಮಯ ಪರಿಪಾಲನೆಯ ಬಗ್ಗೆ ತರಬೇತಿ ನೀಡಬೇಕು. ನಾಟಕಕ್ಕೆ ಪೂರಕವಾದ ಸಂಗೀತ, ಅಗತ್ಯವಾದ ವೇಷಭೂಷಣ, ನೃತ್ಯ ಸಂಯೋಜನೆ, ನಾಟಕದ ಯಶಸ್ವಿ ಪ್ರದರ್ಶನಕ್ಕಾಗಿ ಪ್ರಚಾರ ಹೀಗೆ ಎಲ್ಲ ಆಯಾಮಗಳಲ್ಲೂ ಪೂರ್ವ ತಯಾರಿ ಅತ್ಯಗತ್ಯ.

೧೧. ರಂಗವು ಕಾಲ ಮತ್ತು ದೇಶವನ್ನು ನಿಭಾಯಿಸುವುದು ಹೇಗೆ?

ಪೌರಾಣಿಕ ನಾಟಕವನ್ನು ತಯಾರಿಸಿ ಆಧುನಿಕ ಭಾಷೆಯಲ್ಲಿ ಮಾತನಾಡಿಸಿ, ದೈನಂದಿನ ಉಡುಗೆಯನ್ನು ತೊಡಿಸಿದರೆ ಅಭಾಸವಾಗುತ್ತದೆ. ಕಥಾವಸ್ತುವಿಗೆ ಹೊಂದಿಕೆಯಾಗುವ ಕಾಲಘಟ್ಟ ಹಾಗೂ ಪ್ರದೇಶದ ರೀತಿನೀತಿಗಳನ್ನು ನಾಟಕದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯವಾಗುತ್ತದೆ. ಭಿನ್ನ ಕಾಲ ಮತ್ತು ದೇಶದ ಕತೆಯನ್ನು ನಾಟಕರೂಪಕ್ಕೆ ತರುವಾಗ ಅದೇ ಕಾಲ ಮತ್ತು ದೇಶವನ್ನು ಮರುಚಿತ್ರಿಸುವುದು ಬಹಳ ಮುಖ್ಯವಾಗುತ್ತದೆ. ಅಂದಿನ ಭಾಷೆ, ವಾಕ್ಯರಚನೆ, ಸಂಗೀತ, ನೃತ್ಯದ ಭಂಗಿಗಳು, ಹಾವಭಾವಗಳು, ವೇಷಭೂಷಣ ಹೀಗೆ ಪ್ರತಿ ಹಂತದಲ್ಲೂ ಅಂದಿನ ಸ್ವರೂಪವನ್ನು ಸೃಷ್ಟಿಸಬೇಕು. ಆ ಮೂಲಕ ಪ್ರೇಕ್ಷಕನನ್ನು ಕಾಲ ಮತ್ತು ದೇಶಕ್ಕನುಗುಣವಾಗಿ ರಂಜಿಸಬೇಕು.

೧೨. ನಟನಾ ಸಾಮರ್ಥ್ಯವನ್ನು ಉದಾಹರಣೆಗಳೊಂದಿಗೆ ತಿಳಿಸಿ.

ರಂಗಪ್ರಯೋಗದ ಯಶಸ್ಸಿನ ಹಿಂದೆ ನಟರ ರಂಗಪ್ರಜ್ಞೆ ಮತ್ತು ಸಮಯಪ್ರಜ್ಞೆ ಮುಖ್ಯವಾಗಿರುತ್ತದೆ. ರಂಗದ ಮೇಲೆ ನಟಿಸುತ್ತಿರುವಾಗ ಕಲಾವಿದರಿಗೆ ರಂಗದ ಮೇಲೆ ಏನು ನಡೆಯುತ್ತಿದೆ ಎಂಬ ಹಾಗೂ ತಾವು ಅಭಿನಯಿಸುತ್ತಿದ್ದೇವೆ ಎಂಬ ಎಚ್ಚರ ಇರಲೇಬೇಕು. ಸ್ವಲ್ಪ ಎಚ್ಚರ ತಪ್ಪಿದರೂ ರಂಗದ ಮೇಲೆ ಅನಾಹುತ ಸಂಭವಿಸಿ ಪ್ರಯೋಗಕ್ಕೆ ತೊಂದರೆ ಆಗುವ ಸಾಧ್ಯತೆ ಇರುತ್ತದೆ. ಉದಾಹರಣೆಗೆ ಕತ್ತಿಯಿಂದ ತನ್ನ ಎದುರಿಗಿರುವ ನಟನಿಗೆ ಚುಚ್ಚುವ ಅಭಿನಯ ತೋರಬೇಕೆ ವಿನಃ ಚುಚ್ಚಬಾರದು. ಮೈಮರೆತು ಚುಚ್ಚಿದರೆ ನಟನ ಜೀವಕ್ಕೆ ಅಪಾಯ ಬರುವ ಸಾಧ್ಯತೆ ಇರುತ್ತದೆ. ರಂಗಪ್ರಜ್ಞೆಯ ಕೊರತೆಯಿಂದ ನಾಟಕದ ಪ್ರಯೋಗಕ್ಕೆ ತೊಂದರೆಯಾಗುವ ಸಾಧ್ಯತೆ ಇರುತ್ತದೆ. ನಟ ಅಥವಾ ನಟಿಗೆ ಅಭಿನಯಿಸುತ್ತಿರುವಾಗ ತಾವು ಬಳಸುವ ಪರಿಕರಗಳ ಬಗ್ಗೆ ಗಮನವಿರಬೇಕು.



೧೩. ರಂಗದಲ್ಲಿ ಆಂಗಿಕ ಚಲನೆ, ಮಾತು, ಧ್ವನಿ ಮತ್ತು ಸಂಗೀತದ ಮಹತ್ವವನ್ನು ವಿವರಿಸಿ.

ಸಂಭಾಷಣೆ, ನೃತ್ಯ, ಸಂಗೀತ ಮುಂತಾದ ಹಲವು ಕಲೆಗಳನ್ನು ಜೊತೆಯಲ್ಲಿ ಅಳವಡಿಸುವ ಕಲಾಮಾಧ್ಯಮವೇ ರಂಗಭೂಮಿ. ನಾಟಕ ಕಥಾವಸ್ತುವನ್ನು ಹಲವು ಆಯಾಮಗಳಲ್ಲಿ ಪ್ರೇಕ್ಷಕನಿಗೆ ತಲುಪಿಸುವ ಪ್ರಯತ್ನ ನಡೆಸುತ್ತದೆ. ಇಲ್ಲಿ ಆಂಗಿಕ ಚಲನೆ, ಮಾತು, ಧ್ವನಿ, ಸಂಗೀತ, ನೃತ್ಯ ಎಲ್ಲವೂ ತಮ್ಮದೇ ಆದ ಅಸ್ತಿತ್ವ ಗಳಿಸಿಕೊಂಡಿವೆ. ಕರಾರುವಕ್ಕಾದ ಸಂಭಾಷಣೆಯಷ್ಟೇ ಪರಿಣಾಮಕಾರಿಯಾಗಿ ಆಂಗಿಕ ಚಲನೆ. ಕೆಲವೊಮ್ಮೆ ಮಾತಿನಲ್ಲಿ ಅಭಿವ್ಯಕ್ತಿಸಲಾಗದ ಭಾವಗಳನ್ನು ಆಂಗಿಕ ಅಭಿನಯದಲ್ಲಿ ಕಟ್ಟಿಕೊಡಲು ಸಾಧ್ಯವಿದೆ. ಧ್ವನಿಯ ಏರಿಳಿತ ಪ್ರೇಕ್ಷಕನಿಗೆ ಸಂದರ್ಭದ ತೀವ್ರತೆಯನ್ನು ಕಟ್ಟಿಕೊಡುತ್ತದೆ. ಗಾಯನ ಮತ್ತು ವಾದ್ಯಗಳು ನಾಟಕಕ್ಕೆ ಪೂರಕವೆನಿಸುವ ವಾತಾವರಣವನ್ನು ಸೃಷ್ಟಿಸುತ್ತವೆ. ಉದಾಹರಣೆಗೆ ತೇಜಸ್ವಿಯವರ 'ಕೃಷ್ಣೇಗೌಡನ ಆನೆ' ನೀಳ್ಗತೆಯನ್ನು ನಾಟಕಕ್ಕೆ ರೂಪಾಂತರ ಮಾಡಿದಾಗ ಆನೆಯನ್ನು ರಂಗದ ಮೇಲೆ ತರಲು ಸಾಧ್ಯವಾಗುವುದಿಲ್ಲ. ವೇದಿಕೆಯಲ್ಲಿ ಆನೆ ಇದೆ ಎಂಬುದನ್ನು ಸಾಂಕೇತಿಕವಾಗಿ ತೋರಿಸುತ್ತಾ, ಪ್ರೇಕ್ಷಕನಲ್ಲಿ ಆನೆ ಇರುವಂತೆ ಭ್ರಮೆ ಹುಟ್ಟಿಸಬೇಕು. ಆಗ ವಾದ್ಯಗಳು ಉಂಟುಮಾಡುವ ಶಬ್ದ, ಪಾತ್ರಗಳ ಆಂಗಿಕ ಚಲನೆ, ಹಿನ್ನಲೆ ಸಂಗೀತ, ಮಾತು ಎಲ್ಲವೂ ಒಂದಕ್ಕೊಂದು ಪೂರಕವಾಗುತ್ತವೆ.

೧೪. ಕರ್ನಾಟಕದ ರಂಗಭೂಮಿಯ ಇತ್ತೀಚಿನ ಮಹತ್ತರವಾದ ಬೆಳವಣಿಗೆಗಳ ಬಗ್ಗೆ ತಿಳಿಸಿ.

ಕರ್ನಾಟಕದಲ್ಲಿ ಕಂಡುಬರುವಷ್ಟು ಕ್ರಿಯಾಶೀಲವಾದ ರಂಗಭೂಮಿ ಭಾರತದಲ್ಲಿ ಬೇರೆ ಇಲ್ಲ ಎಂದು ಹೇಳಲು ಅಭಿಮಾನವೆನಿಸುತ್ತದೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ ಮುಂತಾದ ಕಡೆಗಳಲ್ಲಿ ರಂಗ ಚಟುವಟಿಕೆಗಳು ಸಕ್ರಿಯವಾಗಿ ನಡೆಯುತ್ತಿದೆ. ಮೈಸೂರಿನ 'ರಂಗಾಯಣ', ಹೆಗ್ಗೋಡಿನ 'ನೀನಾಸಂ', ಬೆಂಗಳೂರಿನ 'ಅಭಿನಯ ತರಂಗ', ಹುಬ್ಬಳ್ಳಿಯ 'ಸಂಸ್ಕೃತಿ', ಸಾಣೇಹಳ್ಳಿಯ 'ಶಿವಸಂಚಾರ' ಮುಂತಾದ ಕಡೆಗಳಲ್ಲಿ ರಂಗಭೂಮಿಯ ಡಿಪ್ಲೋಮಾ ತರಗತಿ ನಡೆಸಲಾಗುತ್ತದೆ. ಇಷ್ಟೇ ಅಲ್ಲದೆ ಸಣ್ಣಪುಟ್ಟ ರಂಗ ಶಿಬಿರಗಳು, ಹವ್ಯಾಸಿ ರಂಗತಂಡ, ಕಾಲೇಜುಗಳ ರಂಗತಂಡಗಳು ಸಕ್ರಿಯವಾಗಿ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನ ನಡೆಸುತ್ತಿದೆ. ನಾಟಕೋತ್ಸವ, ಕಾಲೇಜು ರಂಗಸ್ಪರ್ಧೆಗಳಿಗೆ ಮನ್ನಣೆ ಸಿಗುತ್ತಿದೆ. ಪ್ರಕಾಶ್ ರೈ ನೇತೃತ್ವದಲ್ಲಿ ಆರಂಭವಾದ 'ನಿರ್ದಿಂಗತ' ತಂಡವು ಹಲವಾರು ವಿದ್ಯಾಸಂಸ್ಥೆಗಳಲ್ಲಿ ಉಚಿತ ಪ್ರದರ್ಶನ ನೀಡುತ್ತಿದೆ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ೯ ಗಂಟೆಗಳ ನಾಟಕವಾಗಿಸಿ ಅಹೋರಾತ್ರಿ ನಾಲ್ಕು ಸಮಾನಾಂತರ ಬಯಲು ವೇದಿಕೆಗಳಲ್ಲಿ ಪ್ರದರ್ಶಿಸಲಾಗಿದೆ. ಹಲವು ಪ್ರದರ್ಶನ ಕಂಡ ಈ ನಾಟಕ ಜನ ಮೆಚ್ಚುಗೆಗೆ ಪಾತ್ರವಾಗಿದೆ.

೧೫. ಮಕ್ಕಳ ನಾಟಕಗಳು ಮತ್ತು ಬೀದಿ ನಾಟಕಗಳ ಬಗ್ಗೆ ಚರ್ಚಿಸಿ.

ಮಕ್ಕಳ ಅಭಿನಯ ಆಸಕ್ತಿಗೆ ಮಕ್ಕಳ ನಾಟಕಗಳು ವೇದಿಕೆಯಾಗುತ್ತವೆ. ಮಕ್ಕಳ ನಾಟಕಗಳು ಬಹುತೇಕವಾಗಿ ನೀತಿ ಪ್ರಧಾನ ಕಥಾವಸ್ತುವನ್ನು ಒಳಗೊಂಡಿರುತ್ತವೆ. ಸರಳ ಧಾಟಿಯಲ್ಲಿ, ಸರಳ ಆಂಗಿಕ ಅಭಿನಯದ ಮೂಲಕ ಪ್ರೇಕ್ಷಕನನ್ನು ಸೆಳೆಯುತ್ತವೆ. ಕನ್ನಡದಲ್ಲಿ ಈವರೆಗೆ ಸುಮಾರು ೨೫೦೦ ಮಕ್ಕಳ ನಾಟಕಗಳು ಪ್ರಕಟವಾಗಿವೆ. ಶೋಭಾ ವೆಂಕಟೇಶ್ ಅವರ ನೇತೃತ್ವದಲ್ಲಿ ನಡೆಯುತ್ತಿರುವ ವಿಜಯನಗರದ 'ಬಿಂಬ' ನಾಟಕ ತಂಡದಲ್ಲಿ ಮಕ್ಕಳಿಗೆ ಅಭಿನಯದ ತರಬೇತಿ ನೀಡಲಾಗುತ್ತಿದೆ. ಶಿಸ್ತುಪಾಲನೆ ಮತ್ತು ಬದ್ಧತೆಯನ್ನು ಆರಂಭದಿಂದಲೇ ರೂಢಿಸಲಾಗುತ್ತದೆ. ಸಭಾಕಂಪನ ಮೀರುವುದು, ನಿರರ್ಗಳ ಮಾತು, ಭಾಷೆಯ ಮೇಲೆ ಹಿಡಿತ, ಸಂಕೋಚ ಹಾಗೂ ಆತಂಕದಿಂದ ಹೊರಬರುವುದು, ಗ್ರಹಿಕಾಶಕ್ತಿ ಎಲ್ಲವೂ ಬಾಲ್ಯದಿಂದಲೇ ಅವರ ವ್ಯಕ್ತಿತ್ವದಲ್ಲಿ ಸೇರ್ಪಡೆಗೊಳ್ಳುತ್ತವೆ. ಮಕ್ಕಳಿಗೆ ಕಥೆಯನ್ನು ಕೊಟ್ಟು, ಅವರಿಂದ ಸಂಭಾಷಣೆ ಬರೆಯಿಸಿ, ಅವರಿಂದಲೇ ನಿರ್ದೇಶನ ಮಾಡಿಸಿ ರಂಗಭೂಮಿಯ ಪೂರ್ಣ ಪ್ರಮಾಣದ ತರಬೇತಿ ನೀಡಲಾಗುತ್ತಿದೆ.

ಸಾಮಾಜಿಕ ಪಿಡುಗುಗಳನ್ನು ಜನರ ಮುಂದಿಡುವ, ಆ ಮೂಲಕ ಜನಜಾಗೃತಿ ಮೂಡಿಸುವ ಪ್ರಯತ್ನಗಳೇ ಬೀದಿ ನಾಟಕಗಳು. ಸಾಮಾನ್ಯವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಇವು ಪ್ರದರ್ಶಿತವಾಗುತ್ತವೆ. ಇವು ಪ್ರಸ್ತುತ ಸಂದರ್ಭದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಾಸ್ತವಗಳನ್ನು ಪ್ರತಿಬಿಂಬಿಸುತ್ತವೆ. ಬೀದಿ ನಾಟಕಗಳು ವರದಕ್ಷಿಣೆ, ಮಹಿಳಾ ಹಕ್ಕುಗಳು, ಆರೋಗ್ಯ ರಕ್ಷಣಾ ಕ್ರಮಗಳು, ಕೋಮು ಸೌಹಾರ್ದ, ಶೋಷಣೆಯ ವಿರುದ್ಧ ಜಾಗೃತಿ ಮುಂತಾದ ಗಂಭೀರ ವಿಷಯವಸ್ತುಗಳನ್ನು ಹೊಂದಿರುತ್ತವೆ. ಸಂಗೀತ, ನೃತ್ಯ, ಹಾಸ್ಯ ಹಾಗೂ ವಿಡಂಬನೆಗಳ ಮೂಲಕ ಪ್ರೇಕ್ಷಕರಿಗೆ ಸಮಸ್ಯೆಯ ಆಳವನ್ನು ಅನಾವರಣಗೊಳಿಸುತ್ತವೆ. ಸಮುದಾಯ ಸಂಘಟನೆ ಮತ್ತು ಎಸ್.ಮೂರ್ತಿಯವರ ಚಿತ್ರ ನಾಟಕ ಸಂಸ್ಥೆಯನ್ನು ಬೀದಿ ನಾಟಕ ಚಳುವಳಿಗಳಲ್ಲಿ ಪ್ರಮುಖವಾಗಿ ಗುರುತಿಸಬಹುದು.

೧೬. ರಂಗ ನಿರ್ದೇಶನ ಮತ್ತು ನಿರ್ಮಾಣದ ಸವಾಲುಗಳು ಯಾವುವು?

ಏನೇ ತೊಂದರೆ ಆದರೂ ನಾಟಕ ಪ್ರದರ್ಶನ ನಿಲ್ಲದೆ ಮುಂದುವರಿಯುತ್ತಿರಬೇಕು ಎಂಬುದು ರಂಗಭೂಮಿಯ ಧ್ಯೇಯ. ಇಲ್ಲಿ ರಂಗ ನಿರ್ದೇಶಕ ಮತ್ತು ನಿರ್ಮಾಪಕ ಬಹುತೇಕವಾಗಿ ಒಂದೇ ರೀತಿಯ ಸವಾಲುಗಳನ್ನು ಎದುರಿಸುತ್ತಾರೆ. ಪ್ರತಿ ಕಲಾವಿದನಿಗೂ ನಾಟಕದ ಎಲ್ಲ ಪಾತ್ರಗಳ ಸಂಭಾಷಣೆ, ಆಂಗಿಕ ಚಲನೆಯ ಪರಿಚಯವಿರಬೇಕು ಎಂಬ ಉದ್ದೇಶದಿಂದ ನಾಟಕದ ತರಬೇತಿ ಹಾಗೂ ತಾಲೀಮು ನಡೆಯುತ್ತಿರುವಾಗ ನಾಟಕಕ್ಕೆ ಸಂಬಂಧಿಸಿದ ಪ್ರತಿಯೊಬ್ಬರನ್ನೂ ಹಾಜರಾಗುವಂತೆ ನೋಡಿಕೊಳ್ಳಲಾಗುತ್ತದೆ. ಈ ಕ್ರಮದಿಂದ ಯಾವುದೇ ಪಾತ್ರಧಾರಿಗೆ ಸಮಸ್ಯೆ ಉಂಟಾದಲ್ಲಿ ಇನ್ನೊಬ್ಬ ಆ ಪಾತ್ರವನ್ನು ನಿರ್ವಹಿಸುವುದು ಸುಲಭವಾಗುತ್ತದೆ. ಆದರೆ ಚಿಕ್ಕ – ಪುಟ್ಟ ಸಂಭಾಷಣೆಯ ಪಾತ್ರಗಳನ್ನು ನಿರ್ವಹಿಸಿದಂತೆ, ಮುಖ್ಯ ನಟನ ಪಾತ್ರವನ್ನು ನಿರ್ವಹಿಸುವುದು ಕಷ್ಟವಾಗುತ್ತದೆ. ಆ ಕಾರಣಕ್ಕೆ ನಿರ್ದೇಶಕ ಮುಖ್ಯ ಪಾತ್ರಗಳಿಗೂ ಬದಲಿ ವ್ಯವಸ್ಥೆಯನ್ನು ಯೋಜಿಸಬೇಕಾಗುತ್ತದೆ. ರವೀಂದ್ರ ಕಲಾಕ್ಷೇತ್ರದಲ್ಲಿ 'ಚಕ್ರರತ್ನ' ನಾಟಕ ಪ್ರದರ್ಶನದ ಸಮಯದಲ್ಲಿ ವಾದ್ಯಗಾರರ ತಂಡಕ್ಕೆ ಸರಿಯಾದ ಸಮಯಕ್ಕೆ ಬರಲು ಸಾಧ್ಯವಾಗಲಿಲ್ಲ. ಸಹಸಂಗೀತಕಾರ್ತಿಯ ಸಹಾಯದಿಂದ ಮತ್ತು ಮೊದಲೆ ತಯಾರಿಸಿಟ್ಟಿದ್ದ ಧ್ವನಿಮುದ್ರಕದ ಸಹಾಯದಿಂದ ಪ್ರದರ್ಶನವನ್ನು ನಿರ್ವಹಿಸಲಾಯಿತು. ಕೆಲವೊಮ್ಮೆ ತಾಂತ್ರಿಕ ಸಮಸ್ಯೆ ಉಂಟಾದಾಗ ಕಲಾವಿದರು ತಮ್ಮ ಸಮಯಪ್ರಜ್ಞೆಯಿಂದ ಸನ್ನಿವೇಶವನ್ನು ನಿಭಾಯಿಸಿದ್ದೂ ಇದೆ. ಬೆಳಕಿನ ವಿನ್ಯಾಸಕರು ಪ್ರದರ್ಶನದ ದಿನ ಅನಿವಾರ್ಯ ಕಾರಣದಿಂದ ಬರದಿದ್ದಾಗ ನಿರ್ದೇಶಕ ಬೆಳಕಿನ ವಿನ್ಯಾಸವನ್ನು ಸೂಕ್ತವಾಗಿ ನಿರ್ವಹಿಸಬೇಕಾಗುತ್ತದೆ. ಹೀಗೆ ನಾಟಕದ ಆರಂಭದ ಹಂತದಿಂದ ನಾಟಕ ಪ್ರದರ್ಶನ ಪೂರ್ಣಗೊಳ್ಳುವವರೆಗೂ ನಿರ್ದೇಶಕ ಎಲ್ಲ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಿದರೆ ಮಾತ್ರ ಯಶಸ್ಸನ್ನು ಪಡೆಯಲು ಸಾಧ್ಯ.

ಸಂದರ್ಶಕರು: ಡಾ. ಚೇತನಾ ಹೆಗಡೆ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮೆಲ್ ಕಾಲೇಜು, ಸ್ವಾಯತ್ತ
ವಸಂತನಗರ, ಬೆಂಗಳೂರು
ಮಿಂಚಂಚೆ : chetuhegde@gmail.com